DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2009
॥ ಧಿಯೋ ಯೋನಃ ಪ್ರಚೋದಯಾತ್ ॥
Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-9 ಸಂಚಿಕೆ-4 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.

## ಶ್ರೀಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ, ಕಿರುನವರಾತ್ರಿ, ಲಕ್ಷ ಕುಂಕುಮಾರ್ಚನೆ ಹಾಗೂ ಸಾಮೂಹಿಕ ದುರ್ಗಾನಮಸ್ಕಾರ ಪೂಜೆ



ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ತಾ.14-03-2009ರ ಶನಿವಾರ ಪ್ರತಿಷ್ಠಾ ದಿನಾಚರಣೆಯು ವಿಜೃಂಭಣೆಯಿಂದ ಜರಗಿತು.

ಬ್ರಹ್ಮಶ್ರೀ ಪಾವಂಜೆ ವಾಸುದೇವ ಭಟ್ಟರ ನೇತೃತ್ವದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಗಣಹೋಮ, ರುದ್ರಾಭಿಷೇಕ, ಶ್ರೀ ಚಕ್ರಪೂಜೆ ಇತ್ಯಾದಿ ಧಾರ್ಮಿಕ ವಿಧಿಗಳು ನಡೆದವು. ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಬ್ರಾಹ್ಮಣ ಸುಹಾಸಿನಿ ಆರಾಧನೆ ನಡೆದು ಪ್ರಸಾದ ವಿತರಣೆಯಾಯಿತು.

ಅನಂತರ ಶ್ರೀಶಾರದಾ ದೇವಸ್ಥಾನ ಹಾಗೂ ಮಂಟಪಗಳಲ್ಲಿ ಅಳವಡಿಸಿದ ಹೊಸ ಧ್ವನಿವರ್ಧಕಗಳನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾಯರು ಇವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಭಾಗವತ ಹಾಗೂ ಗಮಕಿ ನೀಲಾವರ ಲಕ್ಷ್ಮೀನಾರಾಯಣರಾವ್ ಮತ್ತು ಹವ್ಯಾಸಿ ತಾಳಮದ್ದಳೆ ಅರ್ಥದಾರಿ ಶ್ರೀ ಬಾರ್ಕೂರು ನಾಗೇಶ ರಾವ್ ಇವರನ್ನು

(4ನೇ ಪುಟಕ್ಕೆ ...)

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಆಶ್ರಯದಲ್ಲಿ



**ಶ್ರೀ ಶಂಕರಜಯಂತಿ ಕಾರ್ಯಕ್ರಮವು**

ತಾ.30-04-2009 ಗುರುವಾರದಂದು ನಡೆಯಲಿದೆ ಹಾಗೂ
**ಸಾಮೂಹಿಕ ಉಪನಯನ**ವೂ ನೆರವೇರಲಿದೆ.
ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆ ನಡೆಯಲಿರುವುದು.
ಬೆಳಿಗ್ಗೆ 10-30ರಿಂದ ಸಭಾ ಕಾರ್ಯಕ್ರಮ

ಅಧ್ಯಕ್ಷತೆ : **ಮ.ನಾ.ಹೆಬ್ಬಾರ್,** ಹರಿದಾಸರು, ಬೆಳ್ವೆ
ಮುಖ್ಯ ಅತಿಥಿ : **ವಿದ್ವಾನ್ ಶ್ರೀ ಜಗದೀಶ ಶರ್ಮ,** ಪ್ರಾಚಾರ್ಯರು, ಭಾರತಿ ಗುರುಕುಲ, ರಾಮಚಂದ್ರಾಪುರ ಮಠ, ಹೊಸನಗರ

ಗಂಟೆ 9-30ರಿಂದ 10-30ರ ವರೆಗೆ ಸೌಂದರ್ಯಲಹರೀ ಶ್ಲೋಕ ಪಠನ-ಮಾತೆಯರಿಂದ
ಸರ್ವರಿಗೂ ಆದರದ ಸ್ವಾಗತ

– ಕಾರ್ಯದರ್ಶಿ

ಆಸಕ್ತ ಸಮಾಜ ಬಾಂಧವರು ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.20-04-2009ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ಕೋರಲಾಗಿದೆ.

### ಸಾಲ ವಿದ್ಯಾರ್ಥಿ ವೇತನಕ್ಕಾಗಿ ರೂ.3,00,001/- ದೇಣಿಗೆ

ಡಾ। ಎಸ್.ದಯಾನಂದ ರಾವ್‌ರವರು ತಮ್ಮ 'ಡಾ। ಎಸ್. ದಯಾನಂದ ಎಸ್.ರಾವ್ ಎಜುಕೇಶನ್ ಟ್ರಸ್ಟ್'ನ ವತಿಯಿಂದ ರತ್ನಾಬ್ಬಾ ಸ್ಮಾರಕ ಸಾಲವಿದ್ಯಾರ್ಥಿ ವೇತನ ನೀಡುವರೆ 2009-10ನೇ ಸಾಲಿನಲ್ಲಿ ಕುಂಜಿಬೆಟ್ಟು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ರೂ.3,00,001/-ನ್ನು ಕೊಡುಗೆಯಾಗಿ ನೀಡಿದ್ದಾರೆ. ಇವರಿಗೆ ಸಂಘದ ವತಿಯಿಂದ ಅನಂತ ಕೃತಜ್ಞತೆಗಳನ್ನು ಆಡಳಿತ ಮಂಡಳಿಯು ಸಲ್ಲಿಸುತ್ತದೆ.

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ-1.

### ಕುಕ್ಕಿಕಟ್ಟೆ ಶಾಖೆಯ ಉದ್ಘಾಟನಾ ಸಮಾರಂಭ

ದಿನಾಂಕ : 19-04-2009, ರವಿವಾರ ಸಮಯ : ಪೂರ್ವಾಹ್ನ ಘಂಟೆ 10-00
ಸ್ಥಳ : ಅಜಂತಾ ಕಾಂಪ್ಲೆಕ್ಸ್, ಮೊದಲ ಮಹಡಿ, ಕುಕ್ಕಿಕಟ್ಟೆ, ಉಡುಪಿ – 576 101.

ಉದ್ಘಾಟನೆ : **ಡಾ। ನಿ. ಬೀ. ವಿಜಯ ಬಲ್ಲಾಳ್,** ಧರ್ಮದರ್ಶಿಗಳು, ಶ್ರೀ ಜನಾರ್ದನ ಮಹಾಕಾಳೀ ದೇವಸ್ಥಾನ, ಅಂಬಲಪಾಡಿ, ಉಡುಪಿ.
ಅಧ್ಯಕ್ಷತೆ : **ಡಾ। ಪಿ.ಜಿ. ರಾವ್,** ಜನಪ್ರಿಯ ವೈದ್ಯರು, ಮುಂಬಯಿ
ಮುಖ್ಯ ಅತಿಥಿ : **ಶ್ರೀ ಎ. ಗಣಪತಿ ಕಿಣಿ,** ಉದ್ಯಮಿಗಳು, ಅಲೆವೂರು, ಉಡುಪಿ.

**ನಿಮಗಿದೋ ಹೃತ್ಪೂರ್ವಕ ಸ್ವಾಗತ**

| ಎಂ. ಸದಾನಂದರಾವ್ | ಕೆ. ವಿಶ್ವನಾಥ ರಾವ್ | ಕೆ. ವೇಣುಗೋಪಾಲ್ ರಾವ್ |
|---|---|---|
| ಅಧ್ಯಕ್ಷರು | ಶಾಖಾ ವ್ಯವಸ್ಥಾಪಕರು | ಕಾರ್ಯದರ್ಶಿ |

**ಆಡಳಿತ ಮಂಡಳಿ ಸದಸ್ಯರು, ಸರ್ವಸದಸ್ಯರು ಮತ್ತು ಸಿಬ್ಬಂದಿ ವರ್ಗ**

**ಆಡಳಿತ ಮಂಡಳಿ :** ಶ್ರೀಗಳಾದ ಎಂ. ಸದಾನಂದ ರಾವ್, ಅಧ್ಯಕ್ಷರು ; ಸಿ.ಎಸ್.ರಾವ್, ಉಪಾಧ್ಯಕ್ಷರು ; **ನಿರ್ದೇಶಕರು :** ಯು. ಪ್ರಫುಲ್ಲಚಂದ್ರ ; ವೈ. ಮೋಹನರಾವ್ ; ವೈ. ಮುರಳಿಕೃಷ್ಣ ; ಯು. ಅರವಿಂದಕುಮಾರ್ ; ವೈ. ಪ್ರಕಾಶ್ ಕುಮಾರ್ ; ಬಿ. ಕೃಷ್ಣಮೂರ್ತಿ ರಾವ್ ; ಶ್ರೀಮತಿ ಗೀತಾ ಕೆ. ರಾವ್

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಪರಸ್ಪರ ಕೈಕುಲುಕುವಿಕೆಯು ಬಾಂಧವ್ಯದ ಬೆಸುಗೆಗೆ ಒಂದು ಉತ್ತಮ ಮಾಧ್ಯಮವಾಗಿದೆ. ನಮ್ಮನ್ನು ಕುರಿತು ಬೇರೆಯವರು ಗುರುತಿಸುವ ಶಾಸ್ತ್ರವೇ ದೇಹಭಾಷೆ ಅಥವಾ ಬಾಡಿ ಲ್ಯಾಂಗ್ವೇಜ್. ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರೂ ಇದರ ಉಪಯೋಗ ಮತ್ತು ಅರ್ಥವನ್ನು ತಿಳಿದುಕೊಂಡಿದ್ದಾರೆ.

ಪ್ರಾಚೀನ ಕಾಲದಿಂದಲೂ ಈ ಕೈಕುಲುಕುವಿಕೆ ಜ್ಯಾರಿಯಲ್ಲಿತ್ತು. ಹಾಗೆ ಮಾಡುವ ಮೊದಲು ತಮ್ಮ ಎರಡೂ ಕೈಗಳನ್ನು ಮೇಲೆತ್ತಿ 'ಖಾಲಿಯಾಗಿದೆ' ಎಂದು ತೋರಿಸಿಕೊಳ್ಳುತ್ತಿದ್ದರಂತೆ.

ನಮ್ಮ ಹಿರಿಯರು 'ದೂರದಲ್ಲಿ ನಿಂತು ನಮಸ್ಕಾರ ಮಾಡಿ' ಎಂದಿದ್ದಾರೆ. ಆದರೆ ಅದರಲ್ಲಿಯೂ ಬಾಡಿ ಲ್ಯಾಂಗ್ವೇಜ್ ಇದೆ ಎಂದು ತಿಳಿದುಕೊಳ್ಳಬಹುದು. ಬಹಳ ಬಾಗಿ ನಮಸ್ಕರಿಸಿದಾಗ ಅತಿ ವಿನಯತನವೆಂದೂ, ಬಿಗುವಾಗಿ ನಮಸ್ಕರಿಸಿದಾಗ ಆತ ಬಹಳ ಅಫೀಶಿಯಲ್ ಆಗಿದ್ದಾನೆಂದೂ, ಕೈ ಎತ್ತದೇ ನಮಸ್ಕರಿಸಿದಾಗ ಅದು ಅಹಂಕಾರವೆಂದೂ, ಕೈ ಎತ್ತಿಯೂ ಎತ್ತದಂತೆ ಮಾಡಿದನಾದರೆ ಒತ್ತಾಯಪೂರ್ವಕ ನಮಸ್ಕಾರವೆಂದೂ ತಿಳಿದುಕೊಳ್ಳಬಹುದು.

ಇನ್ನು ಮೀಸೆ ತಿರುಗಿಸುತ್ತಾ ಇದ್ದಾಗ ನನಗೆ ಯಾರೂ ಎದುರಿಲ್ಲವೆಂತಲೂ, ತೊಡೆ ತಟ್ಟಿ ಕರೆದಾಗ "ಬನ್ನಿರಿ ನನ್ನೊಡನೆ ಯುದ್ಧಕ್ಕೆ" ಎಂಬ ಕರೆ ಎಂದೂ ತಿಳಿದುಕೊಳ್ಳಬಹುದು.

ಸ್ತ್ರೀ-ಪುರುಷರ ಮಧ್ಯೆ ಒಂದು ಕಣ್ಣು ಮುಚ್ಚಿ ತೆರೆದಂತೆ ಮಾಡಿದಾಗ ಪರಸ್ಪರ ಅಭಿಮಾನಿಸುತ್ತಿದ್ದೇನೆಂಬ ಭಾವನೆ. ಆದರೆ ಪುರುಷ-ಪುರುಷರಲ್ಲಿ ಅಥವಾ ಸ್ತ್ರೀ-ಸ್ತ್ರೀಯರಲ್ಲಿ ಈ ರೀತಿಯ ಕಣ್ಣು ಹೊಡೆಯುವಿಕೆ "ನೀನು ಸುಮ್ಮನಿರು" ನಾನೀಗ ಒಂದು ತಮಾಷೆ ತೋರಿಸುವೆ"ನೆಂಬ ಅರ್ಥವಿರುತ್ತದೆ.

ಪರಸ್ಪರ ಮಾತಾಡುತ್ತಿದ್ದಾಗ ಒಬ್ಬನು ಆಕಳಿಸಿದರೆ ಅವನಿಗೆ ಎದುರಿನವನ ಮಾತು ಹಿಡಿಸಿಲ್ಲವೆಂದೂ, ಎದುರಿನವರು ಮಾತಾಡುತ್ತಿದ್ದಾಗ ದೃಷ್ಟಿ ಭೂಮಿಯ ಕಡೆಗೆ ಹರಿಸಿದಾಗ ಅಥವಾ ಕೈಗಳನ್ನು ಹಿಸುಕಿಕೊಳ್ಳುತ್ತಿದ್ದಾಗ ಅವನು ಭಯದಲ್ಲಿದ್ದಾನೆಂಬ ಸಂದೇಶವನ್ನು ಗುರ್ತಿಸಿಕೊಳ್ಳಬಹುದು.

ಚಿಕ್ಕಮಕ್ಕಳೂ ತಿಳಿದಿರುವಂತಹ ತೃಷೆಯಾದಾಗ ಹೆಬ್ಬೆರಳನ್ನು ಬಾಯಿಯ ಬುಡಕ್ಕೆ ತರುವುದು ಮತ್ತು ದೇಹಬಾಧೆ ತೀರಿಸಲು ಕಿರುಬೆರಳನ್ನು ಎತ್ತುವುದೂ ಸಾಮಾನ್ಯ ವಿಚಾರ.

ಇಂತಹ ಸಂಕೇತಗಳು ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಅರ್ಥವನ್ನು ಕೊಡಬಹುದು. ಈ ಎಲ್ಲ ಸಂಜ್ಞೆಗಳನ್ನು ತಿಳಿದುಕೊಳ್ಳಲು ಪ್ರಯತ್ನಪಟ್ಟಲ್ಲಿ ಮನುಷ್ಯನಿಗೆ ಸಮಾಜಜೀವಿಯಾಗಿ ಪರಸ್ಪರ ಸಂಪರ್ಕಕಕ್ಕೆ ಸಹಾಯವಾಗುವುದರಲ್ಲಿ ಸಂಶಯವಿಲ್ಲ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

.....ನಾನು ದೇವಕಿಯ ಗರ್ಭವನ್ನು ಸೇರಿ ಹುಟ್ಟಲಿರುವೆನು. ಹಾಗೇ ನೀನು ನಂದನ ಪತ್ನಿಯಾದ ಯಶೋಧೆಯ ಮಗಳಾಗಿ ಹುಟ್ಟಬೇಕು. ನಿನ್ನನ್ನು ಜನರು ದುರ್ಗೆ, ಕಾಳಿ ಎಂದು ಮುಂತಾದ ಹೆಸರಿನಿಂದ ಆರಾಧಿಸುವರು. ದೇವಕಿಯ ಗರ್ಭದಿಂದ ಸೆಳೆದ ಕಾರಣ ಮಹಾಶೇಷನ ಅವತಾರಕ್ಕೆ ಸಂಕರ್ಷಣ ಎಂಬ ಹೆಸರೂ ಬರುತ್ತದೆ."

ಯೋಗ ಮಾಯೆಯು ಭಗವಂತನ ಆಜ್ಞೆಯಂತೆ ನಡೆದುಕೊಂಡಳು. ದೇವಕಿಯ ಗರ್ಭದಲ್ಲಿದ್ದ ಮಗುವನ್ನು ಯೋಗ ಮಾಯೆಯು ತೆಗೆದುಕೊಂಡು ಹೋಗಿ ರೋಹಿಣಿಯ ಗರ್ಭದಲ್ಲಿರಿಸಿದಳು. ದೇವಕಿಗೆ ಗರ್ಭಪಾತವಾಯಿತೆಂದು ಜನರು ಮರುಗಿದರು.



ಶ್ರೀಹರಿಯು ತನ್ನ ಪೂರ್ಣ ತೇಜಸ್ಸಿನೊಂದಿಗೆ ವಸುದೇವನ ಮನದಲ್ಲಿ ಕಾಣಿಸಿಕೊಂಡನು. ಅಂತೇ ದೇವಕಿಗೆ ಗರ್ಭದಾನವಾಗುವಾಗ ಅವನು ಅಲ್ಲಿ ಪ್ರವೇಶಿಸಿದನು. ದೇವಕಿಯು ತನ್ನ ಗರ್ಭದಲ್ಲಿ ಜಗದೊಡೆಯನನ್ನು ಹೊತ್ತುಕೊಂಡಳು. ಆಗ ಅವಳಲ್ಲಿ ದಿವ್ಯ ತೇಜಸ್ಸು ವ್ಯಕ್ತವಾಯಿತು. ಆ ತೇಜಸ್ಸನ್ನು ಕಂಡ ಜನರು ವಿಸ್ಮಯದಿಂದ ಮೂಕರಾದರು. ದೇವಕಿಯನ್ನು ದೇವತೆ ಯೆಂದೇ ಆರಾಧಿಸಿದರು. ಕಂಸನೂ ದೇವಕಿಯ ಪ್ರಭೆಯನ್ನು ಕಂಡು, "ಈ ಸಲ ವಿಷ್ಣುವೇ ಹುಟ್ಟುವ ಹಾಗೆ ಕಾಣುತ್ತದೆ. ಇಲ್ಲದಿದ್ದರೆ ಇಷ್ಟೊಂದು ಕಾಂತಿ ದೇವಕಿಗೆ ಹೇಗೆ ಬಂತು? ಇರಲಿ. ಹುಟ್ಟಲಿ ಆ ದುಷ್ಟ. ಆವನಿಗೊಂದು ಗತಿ ಕಾಣಿಸದೆ ಬಿಡುವೆನೇ?" ಎಂದು ಮನಸ್ಸಿನಲ್ಲೇ ನಿಶ್ಚಯಿಸಿದನು.

ಇದೇ ಕಾಲದಲ್ಲಿ ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳು ನಾರದಾದಿ ಋಷಿಗಳು ದೇವಕಿಯ ಗರ್ಭದಲ್ಲಿದ್ದ ಭಗವಂತನನ್ನು ಬಗೆ ಬಗೆಯಾಗಿ ಸ್ತುತಿಮಾಡಿದರು.

ದೇವಕಿಗೆ ತಿಂಗಳು ತುಂಬಿತು. ಶ್ರೀಹರಿಯ ಅವತಾರ ಸಮಯ ಬಂದೇ ಬಿಟ್ಟಿತು. ಅದು ಶ್ರಾಮಣ ಮಾಸ. ಕೃಷ್ಣಪಕ್ಷ. ಅಷ್ಟಮೀ ತಿಥಿ. ಬ್ರಹ್ಮದೇವತ್ಮಕವಾದ ರೋಹಿಣೀ ನಕ್ಷತ್ರ, ಮಧ್ಯರಾತ್ರಿ. ಆ ಕಾರಾಗೃಹದಲ್ಲಿ ದೇವಕಿಯ ಮಗನಾಗಿ ಪರಮಪುರುಷನು ಅವತರಿಸಿದನು. ಬ್ರಹ್ಮಾದಿ ದೇವತೆಗಳು ಉತ್ಸವವನ್ನಾಚರಿಸಿದರು. ಗಂಧರ್ವರು ಭಗವಂತನ ಗುಣಗಳನ್ನು ಗಾನ ಮಾಡಿದರು. ಅಪ್ಸರೆಯರು ನರ್ತಿಸಿದರು. ಸುಗಂಧಮಯವಾದ ಮಂದಾನಿಲ ಬೀಸಿತು. ದಿಕ್ಕುಗಳು ಪ್ರಸನ್ನವಾದವು. ಭಗವನ್ಮಾಯೆಯ ಪ್ರಭಾವದಿಂದ ಕಾರಾಗೃಹದ ಕಾವಲುಗಾರರು ಗಾಢ ನಿದ್ರೆಗೊಳಗಾದರು. ಕಂಸನ ಅರಮನೆಯಲ್ಲೂ ಕಂಸನೂ ಸೇರಿದಂತೆ ಎಲ್ಲರೂ ಮೈಮರೆತು ನಿದ್ರಿಸಿದರು. ಆಗ ಆ ಶಿಶುವು ತನ್ನ ನಿಜ ರೂಪದಲ್ಲಿ ಪ್ರಕಟವಾಯಿತು. ಆಕಾಶದಂತೆ ನೀಲಿ ಮೈಬಣ್ಣ. ಪೀತಾಂಬರದ ಉಡುಪು. ಎದೆಯ ಮೇಲೆ ಕೌಸ್ತುಭ ಮಣಿ. ಕತ್ತಿನಲ್ಲಿ ವನಮಾಲೆ. ನಾಲ್ಕು ಕೈಗಳು. ಅವುಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳು. ರತ್ನ ಖಚಿತ ಕಿರೀಟ. ಸ್ವರ್ಣ ಕುಂಡಲಗಳು. ಅನಿರ್ವಚನೀಯ ಪ್ರಭೆಯಿಂದ ಪ್ರಕಟಗೊಂಡ ಆ ಬಾಲವಿಷ್ಣುವನ್ನು ಕಂಡು ವಸುದೇವ-ದೇವಕಿ ಯರ ಕಂಗಳಿಂದ ಧಾರಾಕಾರವಾಗಿ ಆನಂದ ಬಾಷ್ಪ ಹರಿಯಿತು. ಮೈ ಪುಲಕಗೊಂಡಿತು. ಸಂತೋಷದಿಂದ ವಸುದೇವನು ಮನಸ್ಸಿನಲ್ಲೇ ಬ್ರಾಹ್ಮಣರಿಗೆ ಹತ್ತು ಸಾವಿರ ಗೋವುಗಳನ್ನು ದಾನ ಮಾಡಿದನು. ಮೊದಲು ಭಯವುಂಟಾದರೂ ಜನಿಸಿದವನು ಸಕಲ ಜಗನ್ನಿಯಾಮಕನಾದ ಭಗವಂತನೇ ಎಂಬುದು ಅರಿವಾದಾಗ ಅವನ ಭಯ ಮಾಯವಾಯಿತು. ವಸುದೇವ- ದೇವಕಿಯರು ತಮಗೆ ತಿಳಿದಂತೆ ಆ ಬಾಲ ವಿಷ್ಣುವನ್ನು ಸ್ತೋತ್ರ ಮಾಡಿದರು. ಸಂತುಷ್ಟನಾದ ಪುರುಷೋತ್ತಮನು ಹೇಳಿದನು, "ನಿಮಗೆ ನಿಮ್ಮ ಹಿಂದಿನ ಜನ್ಮಗಳ ಸ್ಮರಣೆಯಾಗಲೆಂದೇ ನಾನು ನನ್ನ ನಿಜ ರೂಪದಲ್ಲಿ ಕಾಣಿಸಿಕೊಂಡಿದ್ದೇನೆ. ನಾನು ಬಂದಿರುವುದೇ ಶಿಷ್ಟ ರಕ್ಷಣೆಗಾಗಿ ಮತ್ತು ದುಷ್ಟ ನಿಗ್ರಹಕ್ಕಾಗಿ. ನಿಮಗೆ ಕಂಸನಿಂದ ಭಯವಿರುವುದಾದರೆ ನನ್ನನ್ನು ಗೋಕುಲಕ್ಕೆ ತೆಗೆದುಕೊಂಡು ಹೋಗಿ. ಯಶೋದೆಯ ಬಳಿಯಲ್ಲಿ ಮಲಗಿಸಿ ಆಕೆ ಈಗ ತಾನೇ ಪ್ರಸವಿಸಿರುವ ಹೆಣ್ಣು ಕೂಸನ್ನು ಇಲ್ಲಿಗೆ ತನ್ನಿ. ಅವಳು ನನ್ನ ಯೋಗ ಮಾಯೆಯೇ. ಎಲ್ಲವೂ ಒಳಿತಾಗುವುದು" ಹೀಗೆಂದ ವಿಷ್ಣುವು ಮತ್ತೆ ಮಾನವರೂಪದ ಶಿಶುವಾದನು. ಆಗ ಆಕಾಶದಲ್ಲಿ ಮಹಾ ಮೇಘಗಳು ಮುತ್ತಿಬಂದವು. ಗುಡುಗು ಸಿಡಿಲುಗಳ ಆರ್ಭಟ ಮೊದಲಾಯಿತು. ಧೋ ಧೋ ಎಂದು ಮಳೆ ಸುರಿಯಲಾರಂಭಿಸಿತು. ವಸುದೇವನು ಮಗುವನ್ನು ಒಂದು ಬುಟ್ಟಿಯಲ್ಲಿಟ್ಟುಕೊಂಡನು. ಸೆರೆಮನೆಯ ಬಾಗಿಲು ತನ್ನಿಂದ ತಾನೇ ತೆರೆದುಕೊಂಡಿತು. ವಸುದೇವನು ಮಗುವಿನ ಬುಟ್ಟಿಯನ್ನು ಹೊತ್ತುಕೊಂಡು ವ್ರಜಭೂಮಿಯ ಕಡೆಗೆ ಹೆಜ್ಜೆಹಾಕಿದನು.

ಮುಸಲಧಾರೆಯಾಗಿ ಮಳೆ ಸುರಿಯುತ್ತಿದ್ದುದರಿಂದ ಮಗು ಮತ್ತು ವಸುದೇವರು ಒದ್ದೆಮುದ್ದೆಯಾಗುವ ಅವಕಾಶವಿತ್ತು. ಆದರೆ ಭಗವಂತನ ಮಹಿಮೆಯಿಂದ ಹಾಗಾಗಲಿಲ್ಲ. ಮಹಾಶೇಷನೇ ತನ್ನ ಸಾವಿರ ಫಣಗಳನ್ನು ಬಿಚ್ಚಿ ಮಗುವಿನ ಮೇಲೆ ಕೊಡೆಯಂತೆ ಹರಡಿ ಹಿಂದಿನಿಂದ ಹರಿದು ಬಂದನು. ನೆರೆ ತುಂಬಿ ಭೋರ್ಗರೆದು ಹರಿಯುವ ಯಮುನಾ ನದಿ ಇದಿರಾಯಿತು. ವಸುದೇವನಿಗಾಗಿ ನದಿ ದಾರಿ ಬಿಟ್ಟುಕೊಟ್ಟಿತು. ವಸುದೇವನು ಗೋಕುಲದಲ್ಲಿ ತನ್ನ ಪರಮಮಿತ್ರನಾದ ನಂದನ ಮನೆಗೆ ತಲುಪಿದನು.

ಆಗ ತಾನೇ ಯಶೋದೆ ಒಂದು ಹೆಣ್ಣು ಮಗುವನ್ನು ಹೆತ್ತಿದ್ದಳು. ಆದರೆ ಅವಳೂ, ಹೆರಿಗೆಯಾಗುತ್ತಲೆ ನಿದ್ರಾವಶಳಾಗಿದ್ದಳು. ವಸುದೇವನು ಬಾಲ ಮುಕುಂದನನ್ನು ಅವಳ ಪಕ್ಕದಲ್ಲಿ ಮಲಗಿಸಿ ಆ ಹೆಣ್ಣು ಕೂಸನ್ನು ಎತ್ತಿಕೊಂಡು ಬಂದಂತೆಯೇ ಹಿಂದಿರುಗಿದನು. ಮಗುವಿನ ಸಹಿತ ಹಿಂದಕ್ಕೆ ಬಂದ ವಸುದೇವನನ್ನು ನೋಡಿ ದೇವಕಿ, ತನ್ನ ಕಾರ್ಯದಲ್ಲಿ ವಸುದೇವನು ಸಫಲನಾಗದೆ ಹಿಂದಕ್ಕೆ ಬಂದಿರಬೇಕು ಎಂದು ಸಂದೇಹಪಟ್ಟಳು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಅನ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯಕ್ಷೇತ್ರೆ ವಿನಶ್ಯತಿ ।**
**ಪುಣ್ಯಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋಭವಿಷ್ಯತಿ ।**

ಅಂದರೆ ಬೇರೆಕಡೆ ಮಾಡಿದಂತಹ ಪಾಪ ಕರ್ಮವು ದೇವರ ಆರಾಧನೆಯನ್ನು ಪುಣ್ಯ ಕ್ಷೇತ್ರಗಳಲ್ಲಿ ಮಾಡುವ ಮೂಲಕ ನಾಶವಾಗುತ್ತದೆ. ಆದರೆ ಪುಣ್ಯಕ್ಷೇತ್ರದಲ್ಲಿ ಮಾಡಿದ ಪಾಪವು ವಜ್ರಲೇಪದಂತೆ ಎಷ್ಟು ತೊಳೆದರೂ ನಾಶವಾಗದು.

**ಪುಸ್ತಕ ಪರಿಚಯ :**

**ಜೈಮಿನಿ ಸೂತ್ರಗಳು**

ಲೇಖಕರು : **ಸುಕುಮಾರ ಆಲಂಪಾಡಿ**

ಸುಕುಮಾರ ಆಲಂಪಾಡಿ ಇವರು ತನ್ನ ಚಿಕ್ಕಪ್ಪ ಎಂ.ವ್ಯಾಸ ಇವರಿಗೆ ಅರ್ಪಿಸಿದ ಕೃತಿ 'ಜೈಮಿನಿ ಸೂತ್ರಗಳು'. 'ಪ್ರಾಯೋಗಿಕ ಫಲ ಜ್ಯೋತಿಷ' ಪುಸ್ತಕದಿಂದ ಜ್ಯೋತಿಷಕ್ಕೊಂದು ಮನೋವೈಜ್ಞಾನಿಕ ಆಯಾಮವನ್ನು ಕೊಡಲು ಪ್ರಯತ್ನಿಸಿ ಯಶಸ್ವಿಯಾದ ಪ್ರಸಿದ್ಧ ಚಿಂತಕರಾದ ಸುಕುಮಾರ ಆಲಂಪಾಡಿಯವರು ಈ ಕೃತಿಯನ್ನು ಕನ್ನಡದಲ್ಲಿ ಮೊತ್ತಮೊದಲಬಾರಿಗೆ ಪ್ರಕಟಿಸಿದ್ದಾರೆ.

ಈ ಪುಸ್ತಕದಲ್ಲಿ ನಾಲ್ಕು ಅಧ್ಯಾಯಗಳಿವೆ. ಪ್ರಥಮ ಅಧ್ಯಾಯದಲ್ಲಿ ಅರ್ಗಲ, ಕಾರಕಗಳು, ವಿಭಿನ್ನ ಲಗ್ನಗಳು, ಆತ್ಮಕಾರಕ, ಕಾರಕಾಂಶದ ದ್ವಾದಶ ಭಾವ ಚಿಂತನೆ, ಆರೂಢ ಲಗ್ನ, ಆರೂಡದ ದ್ವಾದಶ ಭಾವ ಚಿಂತನೆ, ಉಪಪದ ಚಿಂತನೆ, ಸಪ್ತಮ ನವಮ, ಭಾತೃ ಚಿಂತನೆಗಳು- ದ್ವಿತೀಯ ಅಧ್ಯಾಯದಲ್ಲಿ ಆಯು ಚಿಂತನೆ, ಕಕ್ಷವೃದ್ಧಿ, ಹ್ರಾಸ, ಮರಣ ದೆಶೆಗಳು, ಮಾತೃಪಿತೃ ಕಳತ್ರ ಮರಣ ಚಿಂತನೆ, ಮರಣ ರೀತಿ, ನವಾಂಶ ಇತ್ಯಾದಿ ದೆಶೆಗಳು, ಶೂಲ ರಾಶಿ, ರಾಶಿ ಬಲ ನಿರ್ಣಯ, ಚರ, ಕೇಂದ್ರ, ಕಾರಕ, ನಿರ್ಯಾಣ ಶೂಲ ಇತ್ಯಾದಿ ದೆಶೆಗಳು - ತೃತೀಯ ಅಧ್ಯಾಯದಲ್ಲಿ ರಾಜಯೋಗಗಳು, ಆಯು, ರುದ್ರ, ಮಹೇಶ್ವರ, ಬ್ರಹ್ಮ, ಮರಣ, ಮರಣ ಕಾರಣಗಳು, ರೋಗ ಹೇತುಗಳು, ಆದಾನ ಲಗ್ನ, ಜನನ ಪೂರ್ವ ಕಲ್ಪನೆಗಳು - ಚತುರ್ಥ ಅಧ್ಯಾಯದಲ್ಲಿ ಗರ್ಭಾಧ್ಯಾಯ-ಸಂತಾನ ಸ್ವಭಾವ ಚಿಂತನೆ, ಶಿಶು ಲಕ್ಷಣ-ಪ್ರಸವ ಕಾಲ ಇತ್ಯಾದಿ, ಶಿಶು ಲಕ್ಷಣ-ಸ್ತ್ರೀ ಜಾತಕ ಚಿಂತನೆ, ಸಂತಾನ-ಸಾಧ್ಯತೆ ಮತ್ತು ಕಾರಕಗಳು - ಹೀಗೆ ವಿವರವಾದ ಮಾಹಿತಿ ಲಭಿಸುತ್ತದೆ.

ಪುಸ್ತಕದ ಪ್ರಸ್ತಾವನೆಯಲ್ಲಿ ಲೇಖಕರು ತಿಳಿಸಿರುವಂತೆ - "ಪ್ರಕೃತ ನನ್ನ ಪ್ರಸ್ತುತಿಯಾದ "ಜೈಮಿನಿ ಸೂತ್ರಗಳು" ಜ್ಯೋತಿಷ್ಯಕ್ಕೆ ಒಂದು ಹೊಸ ಆಯಾಮವನ್ನು ಕೊಟ್ಟ ಚಿಂತನೆ. ಇದರ ಕುರಿತಾಗಿ ನನ್ನ ಆಸಕ್ತಿಯನ್ನು ಕೆರಳಿಸಿದವರು ಖ್ಯಾತ ಜ್ಯೋತಿಷಿಗಳು ಹೆಸರಾಂತ ಡಾಕ್ಟರರೂ ಆದ ಡಾ। ಯುಸ್.ಯುನ್.ರಾವ್. ಜೈಮಿನಿಯ ನಿಖರತೆ ನನಗೆ ಗಮನೀಯವೆನಿಸಿತು. ಆದರೆ ಜೈಮಿನಿ ಸೂತ್ರಗಳು ಒಂದು ವ್ಯವಸ್ಥಿತ ಸಂಕಲನವಾಗಿಲ್ಲ ಎಂಬುದು ಒಂದು ದೊಡ್ಡ ಕೊರತೆಯಾಗಿದೆ. ಈ ನಿಟ್ಟಿನಲ್ಲಿ ಫಲಭಾಗಗಳಲ್ಲಿ ಕಾರಕಾಂಶ ಮತ್ತು ಆರೂಢಗಳನ್ನು ವ್ಯವಸ್ಥಿತವಾಗಿ ಸಂಕಲಿಸುವ ಪ್ರಯತ್ನ ಮಾಡಿದ್ದೇನೆ. ಈ ಪದ್ಧತಿಯಲ್ಲಿ ದೆಶಾಚಿಂತನೆ ನವಿರಾಗಿದ್ದು ಕ್ಲಿಷ್ಟವಾಗಿದುದರಿಂದ ಕೆಲವೇ ದೆಸೆಗಳ ಕುರಿತು ಒತ್ತು ಕೊಟ್ಟಿದ್ದೇನೆ".


ಪ್ರಕಾಶನ : ಸುಜೀವ ಪ್ರಕಾಶನ, ವೆಂಕಟೇಶ, ಎಸ್.ವಿ.ಟಿ.ರಸ್ತೆ, ಕಾಸರಗೋಡು-571 121.

ಪ್ರತಿಗಳು ದೊರಕುವ ಸ್ಥಳ : ಸಾಹಿತ್ಯ ಕೇಂದ್ರ, ಪಿ.ಎಮ್.ರಾವ್ ರಸ್ತೆ, ಹಂಪನಕಟ್ಟೆ, ಮಂಗಳೂರು-575 001.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.

## ನಮ್ಮನ್ನಗಲಿದ ಹಿರಿಯ ಚೇತನ
# ಶ್ರೀ ನಂದಿಕೂರು ಅನಂತಪದ್ಮನಾಭ ಭಟ್



ಎನ್.ಎ.ಪಿ. ಭಟ್-ಈ ಹೆಸರನ್ನು ನೆನಪಿಸಿಕೊಂಡ ತಕ್ಷಣ ನಮ್ಮ ಸ್ಮೃತಿಪಟಲದಲ್ಲಿ ಅಚ್ಚುಗೊಳ್ಳುವುದು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಇದರ ಖಜಾಂಚಿಯಾಗಿದ್ದ ಶ್ರೀ ಎನ್.ಎ.ಪಿ. ಭಟ್. ಇವರು ಕೈಯಲ್ಲೊಂದು ಬ್ಯಾಗ್ ಮತ್ತು ರಶೀದಿ ಪುಸ್ತಕ ಹಿಡಿದುಕೊಂಡು ಸಮಾಜ ಬಾಂಧವರನ್ನು ವಿಚಾರಿಸಿಕೊಂಡು ಶ್ರೀ ಶಾರದಾ ಮಂಟಪದ ಅಭಿವೃದ್ಧಿಗಾಗಿಯೋ ಅಥವಾ ಶ್ರೀಶಾರದಾ ದೇವಸ್ಥಾನದ ಪೂಜಾ ನಿಧಿಗಾಗಿಯೋ ದೇಣಿಗೆಯನ್ನು ಸಂಗ್ರಹಿಸಿದ್ದು ನೂರಕ್ಕೆ ನೂರು ಸತ್ಯ. ಇವರು ಪ್ರಾಮಾಣಿಕತೆ, ನಿಷ್ಠೆ ಮತ್ತು ಸರಳ ಜೀವನಶೈಲಿಯನ್ನು ಮೈಗೂಡಿಸಿಕೊಂಡವರು. ಇವರದ್ದು ನಿಜವಾದ ನಿಸ್ವಾರ್ಥ ಸಮಾಜ ಸೇವೆ. ಇಂತಹ ಅಪರೂಪದ ಸಮಾಜಸೇವಕ ಮತ್ತು ಮೃದು ಮಾತಿನ ಹಿರಿಯ ಚೇತನ ಶ್ರೀ ಎನ್.ಎ. ಪಿ. ಭಟ್ ತಾ.17-3-2009ರಂದು ಆಕಸ್ಮಿಕವಾಗಿ ದೈವಾಧೀನರಾದರು. ಇವರ ನಿಧನ ನಮ್ಮ ಸಮಾಜಕ್ಕೆ ತುಂಬಲಾರದ ನಷ್ಟ. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ನಿವೃತ್ತ ಅಸಿಸ್ಟೆಂಟ್ ಕಮಿಷನರ್‌ರಾಗಿದ್ದ ಇವರು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಖಜಾಂಚಿಯಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ ನಡೆದ ಶ್ರೀಶಾರದಾ ಮಂಟಪ ಆಡಳಿತ ಮಂಡಳಿಯ ಸಭೆಯಲ್ಲಿ ಇವರ ಸೇವೆಯನ್ನು ಸ್ಮರಿಸಿ ನುಡಿನಮನ ಸಲ್ಲಿಸಲಾಯಿತು.

# ಜಗದ್ಗುರುಗಳ 59ನೇ ವರ್ಧಂತಿ ಆಚರಣೆ

ತಾ.01-04-2009ರಂದು ಮಂಗಳೂರು-ಕೋಟೆಕಾರಿನ ಶ್ರೀ ಶೃಂಗೇರಿ ಮಠದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ 59ನೇ ವರ್ಧಂತ್ಯುತ್ಸವವನ್ನು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

ಪೂರ್ವಾಹ್ನ ಮಹಾಗಣಯಾಗ, ಆಯುಷ್ಯಹೋಮ ನಡೆದು ಮಹಾಪೂಜೆಯ ನಂತರ ಅನ್ನಸಂತರ್ಪಣೆಯು ನೆರವೇರಿತು.


ಅಪರಾಹ್ನ 2-30ರಿಂದ 'ಸಾಂಗತ್ಯ' ಮಂಗಳೂರು ಇವರು ನಡೆಸಿಕೊಟ್ಟ ಕವಿಗೋಷ್ಠಿಯನ್ನು ದ.ಕ.ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪ್ರದೀಪ್ ಕುಮಾರ್ ಕಲ್ಕೂರ ಇವರು ಉದ್ಘಾಟಿಸಿದರು. 'ಸಾಂಗತ್ಯ' ಮಂಗಳೂರು ಇದರ ಅಧ್ಯಕ್ಷರಾದ ಶ್ರೀ ಕುದ್ರೆಪ್ಪಾಡಿ ಜಗನ್ನಾಥ ಆಳ್ವರ ಅಧ್ಯಕ್ಷತೆಯಲ್ಲಿ ನಡೆದ ಈ ಕವಿಗೋಷ್ಠಿಯಲ್ಲಿ ಕರ್ನಾಟಕ ಮೀನುಗಾರಿಕಾ ನಿಗಮದ ಅಧ್ಯಕ್ಷರಾದ ಶ್ರೀ ರಾಮಚಂದ್ರ ಬೈಕಂಪಾಡಿ ಪ್ರಧಾನ ಅಭ್ಯಾಗತರಾಗಿದ್ದರು.

ಸಂಜೆ ನಡೆದ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಸಮಾರೋಪ ಭಾಷಣ ಮಾಡಿದರು.

ಸಾಯಂಕಾಲದ ಸಭಾಕಾರ್ಯಕ್ರಮವನ್ನು ಶ್ರೀ ಇ. ವೆಂಕಟರಮಣ ಉಪಾಧ್ಯಾಯ, ಇರತಿ ಮಠ, ಶ್ರೀ ಕೂರಾಡಿ ಸದಾಶಿವ ಕಲ್ಕೂರ ಬಾರ್ಕೂರು, ಶ್ರೀ ಗೋಪಾಲಕೃಷ್ಣ ಐಯ್ಯರ್ ಮಂಗಳೂರು, ಶ್ರೀ ಹಿರಣ್ಯ ವೆಂಕಟೇಶ ಭಟ್ ಬಾಯಾರು, ಶ್ರೀ ಭಗವಾನ್‌ದಾಸ್ ಶರ್ಮ ಬಪ್ಪನಾಡು ಮೊದಲಾದ ವಿದ್ವಾಂಸರನ್ನು ಸಾಲಿಗ್ರಾಮದ ಕೂಟ ಮಹಾ ಜಗತ್ತಿನ ಅಧ್ಯಕ್ಷರಾದ ಡಾ। ಕೆ. ಎಸ್. ಕಾರಂತರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಶ್ರೀ ಕೆ. ಅನಂತರಾಜ ರಾವ್ ಕಟೀಲು ಅಭಿವಂದನಾ ಭಾಷಣ ಮಾಡಿದರು.

ನಂತರ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಕರ್ನಾಟಕ ಸಂಗೀತ ಕಛೇರಿಯು ಸಂಪನ್ನಗೊಂಡಿತು. ವಸಂತೋತ್ಸವದೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾಯಗೊಂಡಿತು.

# ಆರ್ಷೇಯ ಸಂಸ್ಕೃತಿಯ ಹರಿಕಾರ-ದೇವುಡು



- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು (1896-1962) ಕನ್ನಡ, ತೆಲುಗು, ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯದ ಬಹುಶ್ರುತ ಪ್ರತಿಭೆಯ ವಿದ್ವಾಂಸರು; ವೇದ ವೇದಾಂತ, ಗೀತೆ, ಮೀಮಾಂಸ ಶಾಸ್ತ್ರಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದ ಅತಿ ಶ್ರೇಷ್ಠ ಸಾಹಿತಿಗಳು. ಸಂಸ್ಕೃತ, ತತ್ವಶಾಸ್ತ್ರಗಳಲ್ಲಿ ಎಂ.ಎ. ಓದಿದ್ದ ಶಾಸ್ತ್ರಿಗಳು ಪ್ರಾಚೀನ ವಿದ್ಯಾಸಂಪನ್ನ ಅರ್ವಾಚೀನ ದೃಷ್ಟಿಯ ಮಹಾಸಾಧಕ. ತಂದೆ ಮೈಸೂರು ಅರಮನೆಯ ಹಿರಿಯ ಪುರೋಹಿತರಾಗಿದ್ದುದರಿಂದ ಸಹಜವಾಗಿಯೇ ಹರಿದು ಬಂದ ಆರ್ಷೇಯ ವಿದ್ಯೆಯ ಆಗರವಾದ ಸಂಸ್ಕೃತ ಅಧ್ಯಯನದ ಹಂಬಲ.

ಮುಂದೆ ಪತ್ರಿಕೋದ್ಯಮದಲ್ಲಿಯೂ ಕೈಯಾಡಿಸಿದ ಶಾಸ್ತ್ರಿಗಳು ಮಕ್ಕಳ ಸಾಹಿತ್ಯವನ್ನೂ ಬರೆದರು. ಕಥಾ ಸಂಕಲನಗಳನ್ನೂ ಪ್ರಕಟಿಸಿದರು. ಹಲವು ಕನ್ನಡ ನಾಟಕಗಳನ್ನು ಬರೆದು ಇತರರು ಬರೆದ ನಾಟಕಗಳಲ್ಲಿ ಪಾತ್ರಧಾರಿಗಳಾಗಿಯೂ ಅಭಿನಯಿಸಿದರು. ಚಲನಚಿತ್ರಗಳಲ್ಲಿ ತೆರೆಯ ಮೇಲೂ ತೆರೆಯ ಹಿಂದೆಯೂ ತಮ್ಮ ಪ್ರತಿಭೆಯನ್ನು ತೋರಿಸಿದರು. ಕನ್ನಡದಲ್ಲಿ ಹಲವು ಸಾಮಾಜಿಕ ಕಾದಂಬರಿಗಳನ್ನು ದೇವುಡು ಬರೆದಿದ್ದಾರೆ. ಕರ್ನಾಟಕದವನೇ ಆದ ಕದಂಬ ವಂಶದ ದೊರೆ ಮಯೂರ ವರ್ಮನ ಕಥೆಯನ್ನು ''ಮಯೂರ'' ಎಂಬ ಐತಿಹಾಸಿಕ ಕಾದಂಬರಿಯ ಮೂಲಕ ಕನ್ನಡಿಗರಿಗೆ ಅರ್ಪಿಸಿದ್ದಾರೆ. ತುಂಬಾ ಜನಪ್ರಿಯವಾದ ಈ ಕಾದಂಬರಿ ಮುಂದೆ ವರನಟ ಡಾ। ರಾಜ್‌ಕುಮಾರ್ ನಾಯಕನಾಗಿ, ಮಂಜುಳಾ ನಾಯಕಿಯಾಗಿ ಅಭಿನಯಿಸಲ್ಪಟ್ಟ ಚಲನಚಿತ್ರವಾಗಿ ರಜತಪರದೆಯ ಮೇಲೆ ಮೆರೆದು ಹಲವು ಸಂಭ್ರಮದ ದಾಖಲೆಗಳನ್ನು ಬರೆಯಿತು.

'ಮೀಮಾಂಸ ದರ್ಪಣ', 'ಮೂಲ ಸಂಸ್ಕೃತ', 'ಕನ್ನಡ ಸಂಸ್ಕೃತಿ' ಮೊದಲಾದ ಕೃತಿಗಳನ್ನು ರಚಿಸಿದ ಶಾಸ್ತ್ರಿಗಳು ಹಲವು ಶ್ರೇಷ್ಠ ಇಂಗ್ಲಿಷ್ ಕೃತಿಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಆದರೆ ಇವೆಲ್ಲವುಗಳಿಗೂ ಮೇರು ಪ್ರಾಯವಾಗಿ ದೇವುಡುರವರು ಕನ್ನಡದಲ್ಲಿ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ', 'ಮಹಾದರ್ಶನ' ಎಂಬ ಮೂರು ಪೌರಾಣಿಕ ಕಾದಂಬರಿಗಳನ್ನು ಬರೆದು ಕನ್ನಡಿಗ ಜನಮಾನಸದಲ್ಲಿ ಅಮರರಾಗಿದ್ದಾರೆ.

''ಭಾವನಾತ್ಮಕತೆಯಂತೆಯೇ ಬುದ್ಧಿ ವಿಲಾಸವನ್ನು ಮೇಳವಿಸಿಕೊಂಡ ಇಂಥ ಕಾದಂಬರಿಗಳು ಯಾವ ಭಾಷೆಯಲ್ಲಿಯೇ ಆಗಲಿ ಅಪರೂಪವಾದವು. ಇದಕ್ಕೆ ಕಾರಣ ದೇವುಡು ಅವರಿಗೆ ಸೃಜನಾತ್ಮಕ ಪ್ರತಿಭೆಯ ಜತೆಗೆ ಭಾರತೀಯ ದರ್ಶನ ಶಾಸ್ತ್ರದಲ್ಲಿಯೂ ಇದ್ದ ಅಗಾಧ ತಿಳಿವಳಿಕೆ. ಈ ಕಾದಂಬರಿಗಳು ಅವೆರಡರ ಹೃದ್ಯ ಸಂಗಮವಾಗಿದೆ'' ಎಂದಿದ್ದಾರೆ ತಮ್ಮೊಂದು ಲೇಖನದಲ್ಲಿ ಡಾ। ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು. ಈ ಕಾದಂಬರಿಗಳ ಜನಪ್ರಿಯತೆಗೆ ಅವು ಹಲವಾರು ಬಾರಿ ಮರುಮುದ್ರಣಗೊಂಡಿರುವುದೇ ಸಾಕ್ಷಿ.

ಮೇಲಿನ ಮೂರು ಕೃತಿಗಳಲ್ಲಿ ಶ್ರೇಷ್ಠ ಕೃತಿಯಾದ 'ಮಹಾಬ್ರಾಹ್ಮಣ'ದ ಕಥಾ ನಾಯಕ ವಿಶ್ವಾಮಿತ್ರ. ಕ್ಷತ್ರಿಯ ಕುಲದವನಾದ ಕೌಶಿಕನೆಂಬ ಅರಸನು 'ನಂದಿನಿ' ಎಂಬ ಕಾಮಿತ ಫಲಗಳನ್ನು ಕೊಡುವ ಧೇನುವನ್ನು ಬಯಸಿ ವಸಿಷ್ಠರೊಂದಿಗೆ ಸಂಘರ್ಷಕ್ಕಿಳಿದು ಸೋಲುತ್ತಾನೆ. ಮುಂದೆ ತಾನೂ ವಸಿಷ್ಠರಂತೆ ಬ್ರಹ್ಮರ್ಷಿಯಾಗುವೆನೆಂದು ಪಣತೊಟ್ಟು ಘೋರ ತಪಸ್ಸನ್ನಾಚರಿಸುತ್ತಾನೆ. ಆದರೆ ವಸಿಷ್ಠರು ಅವನ ಏಳಿಗೆಗೆ ಶ್ರಮಿಸಿ ಅವನ ಏಳಿಗೆಗೆ ಕಾರಣರಾಗುತ್ತಾರೆ. ತ್ರಿಶಂಕು ಪ್ರಸಂಗ, ಮೇನಕೆಯೊಡನೆ ಸರಸ ದಾಂಪತ್ಯ, ಘೃತಾಚಿ ಎಂಬ ಅಪ್ಸರೆಯೊಡನೆ ಸಂಸಾರ, ಯಜ್ಞಕ್ಕೆ ಬಲಿಪಶುವಾಗಬೇಕಿದ್ದ ಶುನಶ್ಯೇಪನು ಪಾರಾಗುವುದು, ವಿಶ್ವಾಮಿತ್ರ ಮತ್ತು ಅವನ ಮಕ್ಕಳ ನಡುವಿನ ಮತಭೇದ, ಮಕ್ಕಳ ದುರ್ಮರಣ, ಬ್ರಹ್ಮರ್ಷಿ ಪದವಿ ಪಡೆದು ಕೌಶಿಕ ವಿಶ್ವಾಮಿತ್ರನಾಗುವುದು, ವಿಶ್ವಾಮಿತ್ರರು ಗಾಯತ್ರಿ ಮಂತ್ರ ದೃಷ್ಟಾರರಾಗುವುದು-ಹೀಗೆ ಕಾದಂಬರಿಯು ಹಂತ ಹಂತವಾಗಿ ಬೆಳೆದು ರೋಚಕ ತಿರುವುಗಳನ್ನು ಪಡೆದುಕೊಂಡು ಲೇಖಕನ ಸ್ವೋಪಜ್ಞತೆಯನ್ನು ಮೆರೆಯುತ್ತದೆ. ಯಕ್ಷಗಾನ ಬಯಲಾಟಗಳ ''ವಿಶ್ವಾಮಿತ್ರ-ಮೇನಕೆ'' ಕಥಾ ಪ್ರಸಂಗದ ಪಾತ್ರಧಾರಿಗಳು ಬಳಸುವ ಅಶ್ಲೀಲ ಸಂಭಾಷಣೆಗಳನ್ನು ಮತ್ತೆ ಮತ್ತೆ ಕೇಳಿ ಬೇಸತ್ತಿರುವ ನಮಗೆ ಈ ಕಾದಂಬರಿಯ ''ಮೇನಕಾ ಪ್ರಸಂಗ''ವು ಒಂದು ಅನನ್ಯ ಹೃದ್ಯ ಅನುಭವವನ್ನು ಕೊಟ್ಟು ಗಂಡು-ಹೆಣ್ಣಿನ ನಡುವಿನ ಪ್ರಣಯವು ಇಷ್ಟೊಂದು ದೈವೀಕವೂ, ಮಧುರವೂ, ಪವಿತ್ರವೂ, ಗೌರವಯುತವೂ ಆಗಿರಲು ಸಾಧ್ಯವೇ ಎಂದು ಅನ್ನಿಸುತ್ತದೆ.

ಎರಡನೆಯ ಕಾದಂಬರಿಯಾದ ''ಮಹಾಕ್ಷತ್ರಿಯ'' ಮಾನವನಾದ ನಹುಷ ಚಕ್ರವರ್ತಿ ಇಂದ್ರ ಪದವಿಗೇರುವ ಕಥೆ. ಇಂದ್ರನನ್ನು ಧಿಕ್ಕರಿಸಿ ಸುರಾಚಾರ್ಯ ಪದವಿಯನ್ನು ತ್ಯಜಿಸಿದ ಬೃಹಸ್ಪತಿಯ ಸ್ಥಾನಕ್ಕೆ ವಿಶ್ವರೂಪಾಚಾರ್ಯರ ನೇಮಕ. ಇಂದ್ರನಿಂದ ವಿಶ್ವರೂಪಾಚಾರ್ಯರ ಹತ್ಯೆ. ವೃತ್ರಾಸುರನ ರಂಗ ಪ್ರವೇಶ. ಇಂದ್ರನಿಂದ ವೃತ್ರಾಸುರನ ಹತ್ಯೆ. ವೃತ್ರಹತ್ಯಾ ದೋಷಕ್ಕೆ ಹೆದರಿ ಇಂದ್ರನ ಪಲಾಯನ. ತೆರವಾದ ಇಂದ್ರ ಪದವಿಗೆ ನಹುಷನ ನೇಮಕ. ಇಂದ್ರತ್ವವು ಶಚೀಪತಿಯಾಗುವವರೆಗೂ ಪೂರ್ಣವಾಗುವುದಿಲ್ಲ ಎಂಬ ದೇವಸಭೆಯ ನಿರ್ಣಯ. ಅದಕ್ಕಾಗಿ ಇಂದ್ರಾಣಿಯನ್ನು (ಶಚೀದೇವಿ) ಪೀಡಿಸದೆ ಗೌರವಯುತವಾಗಿಯೇ ಅವಳಲ್ಲಿ ವ್ಯವಹರಿಸಿ ಉದಾತ್ತತೆಯನ್ನು ಪ್ರಕಟಿಸುವ ನಹುಷೇಂದ್ರ. ಶಿಬಿಕೋತ್ಸವ, ಕೊನೆಗೆ ಶಿಬಿಕೋತ್ಸವ ಪೂರ್ಣವಾಗದ ದೋಷಕ್ಕೆ ತನಗೆ ತಾನೇ ಶಿಕ್ಷೆಯನ್ನು ವಿಧಿಸಿಕೊಂಡು ನಹುಷನು ಅಜಗರ (ಹೆಬ್ಬಾವು) ಆಗಿ ಭೂಮಿಗೆ ಮರಳುತ್ತಾನೆ. ಸ್ವರ್ಗಕ್ಕೆ ನಿತ್ಯೇಂದ್ರನ ಪುನರಾಗಮನ ಇವಿಷ್ಟು ಕಾದಂಬರಿಯ ಕಥಾಹಂದರ. ಇಲ್ಲಿ ಲೇಖಕರು ಮೂಲಕತೆಯಿಂದ ಹಲವು ಮಾರ್ಪಾಟುಗಳನ್ನು ಮಾಡಿಕೊಂಡು ಸೃಜನಶೀಲತೆಯನ್ನು ಮೆರೆದಿದ್ದಾರೆ. ಉದಾ. : ಪುರಾಣದಲ್ಲಿ ಶಚೀದೇವಿಯನ್ನು ಬಯಸುವ ಕಾಮುಕನಂತೆ ನಹುಷನನ್ನು ಚಿತ್ರಿಸಿದ್ದರೆ ಇಲ್ಲಿ ಪರಿಗ್ರಹಕ್ಕಿಂತ ತ್ಯಾಗವೇ ಹೆಚ್ಚು ಎನ್ನುವ ಧೀರೋದಾತ್ತ ನಾಯಕನನ್ನಾಗಿ ಬಿಂಬಿಸಿದ್ದಾರೆ. ನಹುಷನು ತನ್ನ ಗಂಡ ನಿಜೇಂದ್ರನಿಗಿಂತಲೂ ಶ್ರೇಷ್ಠ ಮತ್ತು ದಕ್ಷ ಎಂಬುದಾಗಿ ಶಚೀದೇವಿಯೇ ಒಪ್ಪಿಕೊಳ್ಳುತ್ತಾಳೆ. ಇನ್ನು ಅಜಗರವಾಗುವಂತೆ ತನಗೆ ತಾನೇ ಶಿಕ್ಷೆ ವಿಧಿಸಿಕೊಳ್ಳುವ ಪ್ರಸಂಗ-ಇತ್ಯಾದಿಗಳು. ಈ ಕಾದಂಬರಿಯು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿಗೆ ಭಾಜನವಾಗಿರುವುದು ಒಂದು ವಿಶೇಷ.

ಮೂರನೆಯ ಕಾದಂಬರಿ 'ಮಹಾದರ್ಶನ' ಲೇಖಕನ ಕೊನೆಯ ಕೃತಿ. ಕಥಾಂಶವು ಗೌಣವಾಗಿರುವ ಈ ಬೃಹತ್ ಕಾದಂಬರಿಯಲ್ಲಿ ಮಹರ್ಷಿ ಯಾಜ್ಞವಲ್ಕ್ಯರ ಜೀವನ ಚರಿತ್ರೆಯೊಂದಿಗೆ ಆತ್ಮ, ಬ್ರಹ್ಮ, ಮೃತ್ಯು, ಮೊದಲಾದ ತತ್ವ ದರ್ಶನಗಳಿಗೇ ಹೆಚ್ಚು ಮಹತ್ವ ಕೊಡಲಾಗಿದೆ. ಇದರ ಹಲವು ಭಾಗಗಳು ಕಬ್ಬಿಣದ ಕಡಲೆಯಂತಿದ್ದು ಹಲವು ಬಾರಿ ಓದಿದರೆ ಮಾತ್ರ ಮನನ ಮಾಡಿಕೊಳ್ಳಬಹುದಾಗಿದೆ. ಇಲ್ಲಿ ಪಾತ್ರಗಳ ತರ್ಕಬದ್ಧವಾದ ತುಂಬು ಗಾಂಭೀರ್ಯದ ತಾತ್ವಿಕ ನೆಲೆಗಟ್ಟಿನ ವಿವೇಚನಾಪೂರ್ಣವಾದ, ಸಂದರ್ಭೋಚಿತವಾದ ಸಂಭಾಷಣೆಗಳು ದೇವುಡು ಅವರ ಭಾಷಾ ಪ್ರೌಢಿಮೆಗೆ ಸಾಕ್ಷಿಯಾಗಿವೆ.

''ವಸಿಷ್ಠ, ವಿಶ್ವಾಮಿತ್ರ, ನಹುಷ, ಯಾಜ್ಞವಲ್ಕ್ಯ-ಇವರು ಭರತ ಖಂಡವನ್ನು ಒಂದು ಹಿರಿಯ ಸತ್ವವನ್ನಾಗಿ ಬೆಳಗಿದ ಚೈತನ್ಯಗಳು. ತತ್ವಸಿದ್ಧಿಗೆ, ಲೋಕ ಸಂಗ್ರಹಕ್ಕೆ, ಸಾತ್ವಿಕ ಹಿರಿಮೆಗೆ ಎತ್ತಿದ ವಾಣಿಗಳು, ಕೈಗಳು ಅವರವು. ಇವರ ಮೂರ್ತಿ ಸ್ವರೂಪವನ್ನೂ, ಜೀವ ವಿಶೇಷವನ್ನೂ ತಕ್ಕಂತೆ ಕಾಣಿಸುವುದು ಯಾರಿಗೂ ಸಾಹಸವೇ. ಅದನ್ನು ಸಾಧಿಸಿದವರು ದೇವುಡು'' ಎಂದಿದ್ದಾರೆ ವಿ.ಸೀ.

ದೇವುಡುರವರು ಸಾರ್ವಜನಿಕ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದವರಾದರೂ ರಾಜಕಾರಣಿಗಳ ಎದುರು ಕೈ ಒಡ್ಡಿದವರಲ್ಲ, ಯಾರಿಗೂ ತಲೆ ಬಾಗಿದವರೂ ಅಲ್ಲ. ಸ್ವತಃ ಶ್ರೀಮಂತರಲ್ಲದಿದ್ದರೂ ಪರರಿಗಾಗಿ ಸಾಕಷ್ಟು ಖರ್ಚು ಮಾಡುತ್ತಿದ್ದರು. ಪರ ಧರ್ಮಗಳನ್ನೂ ಗೌರವಿಸುತ್ತಿದ್ದ ಅವರು ಕವಿ ಸರ್ವಜ್ಞನ ವಚನಗಳನ್ನು ಸಂಪಾದಿಸಿದ್ದ ರೆವರೆಂಡ್ ಉತ್ತಂಗಿ ಚೆನ್ನಪ್ಪ ಒಮ್ಮೆ ಅವರ ಮನೆಗೆ ಬಂದಾಗ ಅವರ ಪಾದ ತೊಳೆದು ಸ್ವತಃ ಯೇಸುಸ್ವಾಮಿಯೇ ತಮ್ಮ ಮನೆಗೆ ಬಂದಂತೆ ಸಂಭ್ರಮಿಸಿದರಂತೆ. ಮಧುಮೇಹದಿಂದ ತನ್ನ ಕಾಲೊಂದನ್ನು ಕಳೆದುಕೊಂಡ ಅವರು ಧೃತಿಗೆಡದೆ ''ಮಹಾದರ್ಶನ'' ಕಾದಂಬರಿಯನ್ನು ರುಗ್ಣಶಯ್ಯೆಯಲ್ಲಿಯೇ ಬರೆದು ಮುಗಿಸಿದರು. ಅವರು ಶ್ರೀ ಆದಿ ಶಂಕರರ ಜೀವನ ಚರಿತ್ರೆಯನ್ನು ''ಮಹಾಸನ್ಯಾಸಿ'' ಎಂಬ ಕಾದಂಬರಿಯ ಮೂಲಕ ಮೂಡಿಸುವ ಆಶಯವನ್ನು ತನ್ನ ಕೊನೆಗಾಲದಲ್ಲಿ ಹೊಂದಿದ್ದರು ಎನ್ನಲಾಗಿದೆ. ಈ ಆಶಯ ಫಲಿಸದೆ ಹೋದದ್ದು ಶ್ರೀ ಶಂಕರಾಚಾರ್ಯ ಗುರುಪೀಠ ಪರಂಪರೆಯ ಶಿಷ್ಯರಾದ ನಮ್ಮೆಲ್ಲರ ದೌರ್ಭಾಗ್ಯವಲ್ಲದೇ ಮತ್ತೇನು?

(ಈ ಲೇಖನದ ರಚನೆಯಲ್ಲಿ ಹಲವು ಲೇಖಕರ ವಿವಿಧ ಲೇಖನಗಳ ನೆರವನ್ನು ಪಡೆಯಲಾಗಿದೆ. ಇವರಿಗೆಲ್ಲಾ ಲೇಖಕ ಆಭಾರಿ). □

# ನಿಟಿಲಾಪುರ ಹೋರಾಟಕ್ಕೆ ನೈತಿಕ ಬೆಂಬಲ

ಒಂದೆರಡು ಶತಮಾನಗಳ ಹಿಂದೆ ಸನಾತನ ಸಮಾಜದಲ್ಲಿ ಮಾತ್ರವಲ್ಲದೆ ಬ್ರಾಹ್ಮಣ ವರ್ಗದಲ್ಲಿ ಪ್ರತಿಷ್ಠೆಯ ಸ್ಥಾನಮಾನಗಳನ್ನು ಪಡೆದಿದ್ದ ಸ್ಥಾನಿಕ ಬ್ರಾಹ್ಮಣರು ಕಾಲಚಕ್ರ ಉರುಳುತ್ತಾ ಹೋದಂತೆ ತಮ್ಮದೇ ಆದ ಕೃತಿಗಳಿಂದಲೂ ಅನ್ಯವರ್ಗದವರ ತುಳಿತ ದಿಂದಲೂ ಕೆಳವರ್ಗಕ್ಕೆ ತಳ್ಳಲ್ಪಟ್ಟ ವಿಚಾರ ಜನಜನಿತ. ಇದೇ ಸ್ಥಿತಿ ಶಾಶ್ವತವಾಗಿ ಉಳಿಯಲಿಲ್ಲ. ಮತ್ತೆ ಎಚ್ಚರಗೊಂಡು, ವಿದ್ಯಾವಂತರಾಗಿ ಶೋಷಣೆಯ ವಿರುದ್ಧ ಸೆಟೆದು ನಿಂತ ಸ್ಥಾನಿಕ ಸಮಾಜ ತಮ್ಮ ಮೇಲೆ ಹೇರಲ್ಪಟ್ಟ ವಿಕೃತಿಗಳ ಮರ್ಮವನ್ನು ಹೊರಗೆಳೆದು 'ಒಟ್ಟು ಸಮಾಜದ' ಕಣ್ಣು ತೆರೆಯಲು ಸಫಲರಾದರು. ಇದರಿಂದ ಪ್ರಜ್ಞಾವಂತ-ಧೀಮಂತ ಧಾರ್ಮಿಕ-ಸಾಮಾಜಿಕ ನಾಯಕರು ಸ್ಥಾನಿಕ ಬ್ರಾಹ್ಮಣ ವರ್ಗವನ್ನು ಇತರ ಬ್ರಾಹ್ಮಣ ವರ್ಗಕ್ಕೆ ಸಮಾನರಾಗಿ ಕಂಡು ಸಮಾನ ಗೌರವವನ್ನು ಕಲ್ಪಿಸಿದರು.

ಆಧುನಿಕತೆ ಬೆಳೆದುಬಂದ ಹಾಗೆ ಯುವ ಜನಾಂಗ ಇಂತಹ ಮೌಢ್ಯಗಳನ್ನು ಸಾರಾಸಗಟಾಗಿ ಅಲಕ್ಷಿಸಿಬಿಟ್ಟಿತು. ಪರಿಣಾಮ ವಾಗಿ ಎಲ್ಲರೂ ಒಂದೇ ಎಂಬ ಭಾವನೆ ಸಾಮಾನ್ಯ ಜೀವನದಲ್ಲಿ ನೆಲೆಸತೊಡಗಿತು. ಆದರೆ ಕೆಲವರು ಮಧ್ಯವಯಸ್ಕರು ಹಾಗೂ ಜಾತಿಭೀರುಗಳಾದ, ತಮ್ಮನ್ನೇ ಪ್ರಪಂಚದ ಅತ್ಯುನ್ನತ ವರ್ಗದವರು ಎಂಬ ಮೌಢ್ಯಕ್ಕೆ ದಾಸರಾದ ಕೆಲವು ಬ್ರಾಹ್ಮಣರ ಅಜ್ಞಾನದ ಕರಿನೆರಳು ಈ ಸಾಮರಸ್ಯದ ಜೀವನಕ್ಕೆ ಪಾಶವಾಗಿ ಪರಿಣಮಿಸಿ ಈ ತಾರತಮ್ಯದ ನೀಚ ಪ್ರವೃತ್ತಿ ಬ್ರಾಹ್ಮಣ ವರ್ಗದಲ್ಲಿ 21ನೇ ಶತಮಾನದಲ್ಲೂ ವಿಜೃಂಭಿಸಿದೆ.

ಇಂತಹ ಉದಾಹರಣೆಯೊಂದನ್ನು ಕಲ್ಲಡ್ಕ ನಿಟಿಲಾಪುರ ನಿವಾಸಿಯಾದ ಶ್ರೀ ಎನ್. ಮೋಹನರಾಯರು ಪ್ರಸ್ತಾಪಿಸಿದ್ದಾರೆ. ಇದು 2009ರಲ್ಲೇ ನಡೆದ ಒಂದು ಸತ್ಯಕಥೆ. ನಿಟಿಲಾಪುರ ನಿಟಿಲಾಕ್ಷ ಸದಾಶಿವ ದೇವಸ್ಥಾನ ಇದರ ಕಾರ್ಯಕ್ಷೇತ್ರ. 'ನಿಟಿಲೇಶ್ವರ ದೇವ' ಇದಕ್ಕೆ ಸಾಕ್ಷಿ.

ನಿಟಿಲೇಶ್ವರ ದೇವಸ್ಥಾನದ ಉತ್ಸವ ಸಂದರ್ಭದಲ್ಲಿ ಅನ್ನ ಸಂತರ್ಪಣೆಯಲ್ಲಿ ಎಲ್ಲಾ ಬ್ರಾಹ್ಮಣರಿಗೂ (ತಂತ್ರಿ ವರ್ಗದವರು, ಪ್ರಧಾನ ಅರ್ಚಕರು ಮತ್ತು ದೇವರು ಹೊರುವವರನ್ನು ಹೊರತುಪಡಿಸಿ) ಬಡಿಸುವುದು, ಹಣ್ಣುಕಾಯಿ ಮಾಡುವುದು ಹಾಗೂ ತೀರ್ಥಪ್ರಸಾದ ಮಾಡುವುದಕ್ಕೆ ಅನುಮತಿ ನೀಡಬೇಕೆಂಬ ಸ್ಥಾನಿಕ ಬ್ರಾಹ್ಮಣರ ಕೇಳಿಕೆಗೆ ನಿಟಿಲೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸ್ಪಂದಿಸಿ ಅನುಮತಿ ನೀಡಿದ್ದರು. ಊಟ ಬಡಿಸುವಾಗ ತಂತ್ರಿ ವರ್ಗದವರು, ಪ್ರಧಾನ ಅರ್ಚಕರು ಹಾಗೂ ದೇವರು ಹೊರುವವರಿಗೆ (ತಾತ್ಕಾಲಿಕವಾಗಿ) ಬಡಿಸುವುದು ಬೇಡ, ಮುಂದೆ ತಿಳಿಸುತ್ತೇವೆ ಎಂದಿದ್ದರು. ಅನುಮತಿ ನೀಡಿದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ದೊಡ್ಡತನವನ್ನು ಗೌರವಿಸುವ ಸದ್ಭಾವನೆ ಉಳಿದ ''ಉಚ್ಚವರ್ಗ''(?) ದವರೆಂಬವರಲ್ಲಿ ಇರಲಿಲ್ಲ.

ಬಡಿಸಲು ಹೋದಾಗ ಕೆಲವರು ಮಹಾಬ್ರಾಹ್ಮಣರು ಎದ್ದು ಹೋದರಂತೆ! ಆಚಾರ್ಯ ವರ್ಗದವರ ಜತೆ ಕುಳಿತು ಊಟ ಮಾಡಿ ಪುನೀತರಾದರಂತೆ. ಪಲ್ಲಕ್ಕಿ ಹೊರಲು ಕೈ ಜೋಡಿಸುವ ವಿಚಾರ ಚರ್ಚೆಗೆ ಬಂದಾಗ ತನ್ನನ್ನು ಸಂಭಾವಿತ ಸುಧಾರಕನೆಂದು ನಟಿಸುವ ಒಬ್ಬ ವ್ಯಕ್ತಿ ''ಒಂದು ವೇಳೆ ಸ್ಥಾನಿಕರು ಪಲ್ಲಕ್ಕಿ ಹಿಡಿದಲ್ಲಿ ನಾವು ಹಿಡಿಯುವುದಿಲ್ಲ'' ಎಂದು ಶಾಸ್ತ್ರಹೇಳುತ್ತಾ ಹೇಳುತ್ತಾ ಗಾಳ ಹಾಕಿದನಂತೆ. ನಿಟಿಲೇಶ್ವರ-ಕಟ್ಟೆ ಪೂಜೆಗೆ ಬಂದಾಗ ಒಬ್ಬ ವಿಪ್ರಶ್ರೇಷ್ಠ, ಸ್ಥಾನಿಕರ ಕೈಯಿಂದ ಎಣ್ಣೆ ಪಾತ್ರೆ ತೆಗೆದುಕೊಳ್ಳಲು ಸಾಧ್ಯವಿಲ್ಲ... ಕೆಳಗಿಡಿ ಎಂದನಂತೆ.

ಈ ಎಲ್ಲಾ ಅಪಕೃತ್ಯಗಳನ್ನು ಸ್ಥಾನಿಕ ಬ್ರಾಹ್ಮಣರು ಪ್ರಶ್ನಿಸಿದಾಗ ಉದಾರವಾಗಿ ''ಹಿರಿಯರು ಮಾಡಿದ ಸಂಪ್ರದಾಯ'' ಎಂದರಂತೆ. ಮೇಲೆ ತಿಳಿಸಿದ ವ್ಯಕ್ತಿಗಳು ಪಾಲಿಸುತ್ತಿರುವ ಸತ್ಸಂಪ್ರದಾಯಗಳ ಬಗ್ಗೆ ತಿಳಿಸುವುದಕ್ಕೆ ಬೇರೆಯೇ ಲೇಖನಬೇಕಾದೀತು. ಅದು ಮಾಡುವವರಿಗೇ ಭೂಷಣ?! ಹೇಳುವುದಕ್ಕೆ ಹೇಸಿಗೆಯಾದೀತು ಎನ್ನುತ್ತಾರೆ ಮೋಹನರಾಯರು. ಅವರ ಹೇಳಿಕೆಯಂತೆ, ಮಾತ್ರವಲ್ಲದೆ ನಮಗೂ ಮನವರಿಕೆ ಯಾಗಿರುವಂತೆ ಈ ಶ್ರೇಷ್ಠ ಸಂಪ್ರದಾಯ ವಾದಿಗಳು ನಮ್ಮವರ ಮನೆಗಳಿಗೆ ಬೇರೆ ಸಂದರ್ಭದಲ್ಲಿ ಬಂದಾಗ ಇಂತಹ ಮಡಿವಂತಿಕೆಯ ಛಾಯೆಯೂ ಇಲ್ಲದೆ ಸಂತೋಷ ದಿಂದ ಊಟ ಮಾಡುತ್ತಾರೆ. ಇವರಿಗೆ ಭೋಗ-ನಿಯೋಗಗಳಿಗೆ ಯಾವ ಜಾತಿಯೂ ಸಮ್ಮತ. ಆದರೆ ಕೇವಲ ಬೆರಳೆಣಿಕೆಯ ಸಂದರ್ಭಗಳಲ್ಲಿ ಈ ಭಿನ್ನ-ಬೇಧ ತಲೆ ಎತ್ತುವುದು ಯಾಕೆ? ಇಂತಹ ಹಲವಾರು ಅನಾಚರಣೆಗಳನ್ನು ಮೋಹನರಾಯರು ಮುಂದಿಡುತ್ತಾರೆ. ಪ್ರಶ್ನೆ ಕೇಳುತ್ತಾರೆ-ಯಾಕೆ ಹೀಗೆ?

ತಮ್ಮ ಬೇಡಿಕೆ ಶಾಸ್ತ್ರೀಯವಾಗಿ, ಧಾರ್ಮಿಕವಾಗಿ, ಸಾಂದರ್ಭಿಕವಾಗಿ ನ್ಯಾಯ ಸಮ್ಮತ. ಇದಕ್ಕೆ ಧಾರ್ಮಿಕ ನಾಯಕರ, ಪೀಠಾಧಿಪತಿಗಳ, ಶಾಸ್ತ್ರಪರಿಣತರ ಅಂಕಿತವಿದೆ. ನ್ಯಾಯಸಮ್ಮತವಲ್ಲದ, ಮರುವಿಮರ್ಶೆಗೆ ಒಳಗಾಗತಕ್ಕ ಅಂಧಾಚರಣೆಗಳನ್ನು ನಾವು ಪ್ರಶ್ನಿಸುತ್ತಿದ್ದೇವೆ. ಇದನ್ನು ಕಡೆಗಣಿಸತಕ್ಕದ್ದಲ್ಲ. ಇದಕ್ಕೆ ತಾ.31-12-2009ರ ಒಳಗೆ ನಮಗೆ ಲಿಖಿತ ಉತ್ತರ ಬೇಕು ಎಂಬುದಾಗಿ ವ್ಯವಸ್ಥಾಪನಾ ಸಮಿತಿಗೆ ಮೋಹನರಾಯರು ಅಹವಾಲು ಸಲ್ಲಿಸಿದ್ದಾರೆ. ಇದಕ್ಕೆ ತಪ್ಪಿದಲ್ಲಿ ಈ ವಿಚಾರ ಅಣು-ವಿಕಿರಣಗೊಂಡು ವ್ಯಾಪಕ ಸ್ಫೋಟಕ್ಕೆ ಕಾರಣವಾದೀತು? ಎಂಬ ಎಚ್ಚರಿಕೆ ಯನ್ನೂ ನೀಡಿದ್ದಾರೆ.

ನಿಶ್ಯಬ್ದವಾಗಿ ನಡೆಯುತ್ತಿದ್ದ ಇಂತಹ ಕುಟಿಲ ಕಾರ್ಯತಂತ್ರಕ್ಕೆ ನಿಟಿಲೇಶ್ವರನ ಸನ್ನಿಧಿಯಲ್ಲಿ ನೇರ ಸಂಗ್ರಾಮವನ್ನು ನಮ್ಮ ಕೆಲವರು ಸಾರಿದ್ದಾರೆ. ಇದು ಶ್ರೀಕೃಷ್ಣನ ಪಾಂಚಜನ್ಯ ವಾಗಲು ನಮ್ಮ ಧ್ವನಿಯನ್ನು ಸೇರಿಸಿ ನೈತಿಕವಾಗಿ ಈ ಹೋರಾಟವನ್ನು ನಾವು ಬೆಂಬಲಿಸುತ್ತೇವೆ ಎಂದು ಅನೇಕರು ಸಾರಿದ್ದಾರೆ? ನೀವು? ನೀವೂ....

### ಇರುವುದಿಲ್ಲ ಕೊರಗು

ಆಟದಲ್ಲಿ
ಸೋಲುಂಟು
ಗೆಲುವುಂಟು
ಕೆಲವೊಮ್ಮೆ
'ಡ್ರಾ' ಆಗುವುದುಂಟು
ಸಮಚಿತ್ತದಲೆ
ವೀಕ್ಷಿಸಿದರೆ,
ಆಟಕ್ಕೆ ಮೆರುಗು,
ಇರುವುದಿಲ್ಲ
ಕೊರಗು

### ಸಾವು

ಯಾರಾದರೂ
ಗೆಳೆಯರು
ಮಧ್ಯ ಮಧ್ಯ
ಕೈ ಕೊಟ್ಟು ಹೋಗಬಹುದು
ಆದರೆ
ಹುಟ್ಟಿನೊಂದಿಗೆ
ಜೀವದ ಕೊನೆ ತನಕ
ಜೊತೆ ಜೊತೆಯಾಗಿ
ಸದಾ ಇರುವ ಜತೆಗಾರ-ಸಾವು

### ನಿರೀಕ್ಷೆ

ಇರುವವರ ಬಗ್ಗೆ
ಉಪೇಕ್ಷೆ
ಬರುವವರ ಬಗ್ಗೆ
ನಿರೀಕ್ಷೆ
ಇದು ಮನುಜನ ಸಹಜ ಅಪೇಕ್ಷೆ

**- ಮಾರ್ಪಳ್ಳಿ ಆರ್. ಮಂಜುನಾಥ್, ಶಿವಮೊಗ್ಗ**

## ಪ್ರತಿಷ್ಠಾ ವಾರ್ಷಿಕೋತ್ಸವ ....

(....1ನೇ ಪುಟದಿಂದ)

ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ಮತ್ತು ಸಂಘದ ನಿರ್ದೇಶಕರಾದ ಶ್ರೀ ಬಿ. ದೇವರಾವ್ ಇವರು ಸನ್ಮಾನಿಸಿದರು. ಶ್ರೀಶಾರದಾ ಪತ್ರಿಕೆಯ ಪ್ರಧಾನ ಸಂಪಾದಕ ರಾದ ಶ್ರೀ ವೈ. ಮೋಹನ ರಾವ್ ಧನ್ಯವಾದ 'ವನ್ನಿತ್ತರು. ನಂತರ ಸುಮಾರು ಒಂದು ಗಂಟೆಯ ಕಾಲ ಸನ್ಮಾನಿತರಿಂದ 'ಶ್ರೀಕೃಷ್ಣ ಸಾರಥ್ಯ' ಗಮಕ ವಾಚನ ಪ್ರವಚನ ಕಾರ್ಯಕ್ರಮ ನಡೆಯಿತು. ಪ್ರಸಾದ ಭೋಜನ ದೊಂದಿಗೆ ಪ್ರತಿಷ್ಠಾ ಮಹೋತ್ಸವವು ಮುಕ್ತಾಯಗೊಂಡಿತು.

**ಶ್ರೀಶಾರದಾ ಮಂಟಪದಲ್ಲಿ ಲಕ್ಷ ಕುಂಕುಮಾರ್ಚನೆ :**

ತಾ.15-03-2009ನೇ ಆದಿತ್ಯವಾರದಂದು ರಜತೋತ್ಸವ ವರ್ಷಾಚರಣೆಯ ಅಂಗವಾಗಿ, ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ಲಲಿತ ಸಹಸ್ರನಾಮಗಳಿಂದ ಲಕ್ಷ ಕುಂಕುಮಾರ್ಚನೆಯನ್ನು ನೆರವೇರಿಸ ಲಾಯಿತು. ಈ ಸಂದರ್ಭದಲ್ಲಿ 25 ದಂಪತಿಗಳು ಉಪಸ್ಥಿತರಿದ್ದು ಲಲಿತ ಸಹಸ್ರನಾಮವನ್ನು 4 ಅವರ್ತ ಪಠಿಸಿ ಅರ್ಚನೆ ಮಾಡಿದರು. ಮಹಾಪೂಜೆಯ ಬಳಿಕ ಪ್ರಸಾದ ವಿತರಣೆ ನಡೆಯಿತು. ಅಂದಿನ ಪ್ರಸಾದ ಭೋಜನದ ಪ್ರಾಯೋಜಕತ್ವವನ್ನು ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್. ರಾವ್ ವಹಿಸಿದ್ದರು.

**ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆ :**


ಕಿರುನವರಾತ್ರಿಯ ಕೊನೆಯ ದಿನವಾದ ತಾ.03-04-2009ನೇ ಶುಕ್ರವಾರ ಸಂಜೆ 5-00 ಗಂಟೆಗೆ ಪರಿಸರದ ಭಕ್ತ ಬಾಂಧವರು ಭಕ್ತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ದೇವರ ಸನ್ನಿಧಿ ಯಲ್ಲಿ, ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ನೆರವೇರಿತು. ಈ ಸಂದರ್ಭದಲ್ಲಿ ಭಕ್ತರಿಂದ ದೇವೀ ಸಹಸ್ರನಾಮ ಹಾಗೂ ಋತ್ವಿಜರಿಂದ ಮತ್ತು ನಮ್ಮ ಮಂಟಪದ ಅನುಷ್ಠಾನ ಸದಸ್ಯರಿಂದ ಸಪ್ತಶತೀ ಪಾರಾಯಣ ನಡೆಯಿತು. ಪೂಜೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಭಕ್ತ ಬಾಂಧವರು ಪಾಲ್ಗೊಂಡಿದ್ದರು. ರಾತ್ರಿ 8-00 ಗಂಟೆಗೆ ಮಹಾಪೂಜೆ ಮುಗಿದ ಬಳಿಕ ತೀರ್ಥ ಪ್ರಸಾದ ವಿತರಣೆಯಾಯಿತು. ಭೋಜನ ಪ್ರಸಾದದೊಂದಿಗೆ ಕಾರ್ಯಕ್ರಮವು ಸಮಾಪ್ತವಾಯಿತು.


**ರಾಮಾ ಅಟೋಮೊಬೈಲ್ಸ್**


ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



ಉಡುಪಿ ವಿಶಿಷ್ಟ ರುಚಿಯುಳ್ಳ

**Rao's 'ಮಾತೃಛಾಯಾ'ರವರ**

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ - 576 101. ಫೋನ್ : 2522444**

**PRAMOD**

**AUTOMOBILES**

Ph : 2491723 (O)
2493633 (H.O.)
2212723 (R)

KARANGALPADY, MANGALORE - 575 003.

: Wholesale & Retail Dealers in :

2 & 3 WHEELERS SPARES & ACCESSORIES

Prop. : **Ln. K. HARSHA KUMAR**

## ಮಾಂಗಲ್ಯಂ ತಂತುನಾನೇನ ....

ಇನ್ನ ಪದವು ಶ್ರೀಮತಿ ಮತ್ತು ಶ್ರೀ ರವೀಂದ್ರ ರಾಯರ ಪುತ್ರ **ಸಂಪತ್‌ಕುಮಾರ್** ಹಾಗೂ ಉಡುಪಿ ಚಿಟ್ಪಾಡಿಯ ಶ್ರೀಮತಿ ಮತ್ತು ಶ್ರೀ ಎಸ್. ಸುಂದರ ರಾಯರ ಪುತ್ರಿ **ಶಿಲ್ಪ** ಇವರ ವಿವಾಹವು ತಾ.19-3-2009ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ

ಬೆಳ್ತಂಗಡಿ ಕಿಲ್ಲೂರಿನ ಶ್ರೀಮತಿ ಮತ್ತು ಶ್ರೀ ಬಿ. ಕೆ. ಸುಬ್ಬರಾವ್ ಹಾಗೂ ಮಕ್ಕಳು ಬಂಗಾಡಿ ಕಿಲ್ಲೂರು ಕುದ್ರೋಳಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹದ ಪ್ರವೇಶೋತ್ಸವವನ್ನು ತಾ.10-04-2009ರಂದು ನೆರವೇರಿಸಿದರು

□ □ □ □ □

ಶ್ರೀಮತಿ ಕೀರ್ತಿ ರಾವ್ ಮತ್ತು ಶ್ರೀ ಕಿರಣ್ ಕುಮಾರ್ ಎಂ., ಬ್ರಹ್ಮಾವರ ಇವರು ಮಂಗಳೂರಿನಲ್ಲಿ ನೂತನವಾಗಿ ನಿರ್ಮಿಸಿದ ಗೃಹ **''ಸ್ಕಂದ''** ಇದರ ಗೃಹಪ್ರವೇಶವು ತಾ.10-04-2009ನೇ ಶುಕ್ರವಾರ ರಾತ್ರಿ ಹಾಗೂ ಮರುದಿನ ''ಗಣಹೋಮ'' ಹಾಗೂ ''ಶ್ರೀ ಸತ್ಯನಾರಾಯಣ ಪೂಜೆ'' ಯೊಂದಿಗೆ ನೆರವೇರಿತು.

## ವೈವಾಹಿಕ ವಿಶೇಷಾಭಿಷೇಕ

**ಚೆನ್ನೈ ಆರ್.ಕೆ.ನಗರದಲ್ಲಿ ವಾಸಿಸುತ್ತಿರುವ ಶ್ರೀ ಐ. ಕೆ. ಸದಾಶಿವರಾವ್ ಹಾಗೂ ಶ್ರೀಮತಿ ಐ. ಕೆ. ಪ್ರಭಾವತಿ ದಂಪತಿಗಳ ವೈವಾಹಿಕ ಜೀವನದ ವಿಶೇಷ ಸಂದರ್ಭದಲ್ಲಿ ಏರ್ಪಡಿಸಿದ ಅಭಿಷೇಕ ಕಾರ್ಯಕ್ರಮವು ತಾ.15-03-2009 ರಂದು ಮಂದವೇಲಿಪಕ್ಕಂ, ಚೆನ್ನೈನಲ್ಲಿ ಇರುವ ಕಲ್ಯಾಣನಗರ್ ಅಸೋಸಿಯೇಶನ್‌ನಲ್ಲಿ ವೈಭವದಿಂದ ಜರಗಿತು.**

## ಬ್ರಹ್ಮೋಪದೇಶ

### ಚಿ। ಅಮರಾಭಿರಾಮಸ್ವಾಮಿ

ಪಡುಬಿದ್ರಿಯ ಶ್ರೀಮತಿ ಮತ್ತು ಶ್ರೀ ಜಗದಾಭಿರಾಮಸ್ವಾಮಿಯವರ ಪುತ್ರ ಅಮರಾಭಿರಾಮಸ್ವಾಮಿಯ ಬ್ರಹ್ಮೋಪದೇಶವು ತಾ.1-4-2009 ರಂದು ಶ್ರೀಕ್ಷೇತ್ರ ಉದಯಾದ್ರಿ ದೇವಸ್ಥಾನದಲ್ಲಿ ನೆರವೇರಿತು.

## ವಿಳಾಸ ಬದಲಾವಣೆ

**P.D. SHEKAR RAO**
Door No.146A(1), Adharsha Ramanagar,
Near Balaganapathi Temple
Post Padubidri-574111, Udupi Dist.

□ □ □ □ □

**B. HARISHCHANDRA RAO**
House No.F7,
Tirupathi Suprim Enclave
Paitan Road, Jalna Nagar,
Aurangabad - 431 001.
(Maharastra State)

## ಮೇಷ ಮಾಸದ ವಿಶೇಷ ದಿನಗಳು

| | |
|---|---|
| 13-04-2009 | ಮೇಷ ಸಂಕ್ರಮಣ<br>ಅಶ್ವಿನಿ ನಕ್ಷತ್ರಾರಂಭ<br>ಸಂಕಷ್ಟಹರ ಚತುರ್ಥೀ<br>ಚಂದ್ರೋದಯ ರಾತ್ರಿ ಗಂ.10.05ಕ್ಕೆ |
| 14-04-2009 | ಸೌರಯುಗಾದಿ |
| 21-04-2009 | ಸರ್ವೈಕಾದಶೀ |
| 22-04-2009 | ಪ್ರದೋಷಃ |
| 25-04-2009 | ಅಮಾವಾಸ್ಯಾ |
| 27-04-2009 | ಭರಣೀ ನಕ್ಷತ್ರಾರಂಭ,<br>ಅಕ್ಷಯ ತೃತೀಯಾ |
| 29-04-2009 | ಶ್ರೀ ಶಂಕರ ಜಯಂತಿ |
| 05-05-2009 | ಸರ್ವೈಕಾದಶೀ |
| 06-05-2009 | ಪ್ರದೋಷಃ |
| 09-05-2009 | ಪೂರ್ಣಿಮಾ |
| 11-05-2009 | ಕೃತ್ತಿಕಾ ನಕ್ಷತ್ರಾರಂಭ |
| 12-05-2009 | ಸಂಕಷ್ಟಹರ ಚತುರ್ಥೀ<br>ಚಂದ್ರೋದಯ ರಾತ್ರಿ ಗಂ.9.40ಕ್ಕೆ |
| 14-05-2009 | ವೃಷಭ ಸಂಕ್ರಮಣ |

## ಅಭಿನಂದನೆ

### ಕುಮಾರಿ ಭಾವನಾ ರಾವ್



### ಮೂರು ವರ್ಷಗಳಿಂದ ಪ್ರಥಮ ಸ್ಥಾನ ಚಿನ್ನದ ಪದಕ ವಿಜೇತೆ

ಪಾಂಡಿಚೇರಿಯ JIPMER ಮೆಡಿಕಲ್ ಕಾಲೇಜಿನಲ್ಲಿ ಅಂತಿಮ ವರ್ಷದ MBBSನಲ್ಲಿ ಅಭ್ಯಾಸ ಮಾಡುತ್ತಿರುವ ಕುಮಾರಿ ಭಾವನಾ ರಾವ್ ಸತತವಾಗಿ ಮೂರು ವರ್ಷಗಳಿಂದ ತಲಾ ಒಂದೊಂದು ವಿಷಯದಲ್ಲಿ (Bio-Chemistry, Micro Biology & ENT) ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕಗಳನ್ನು ಪಡೆದು ಕಾಲೇಜಿಗೂ, ಹೆತ್ತವರಿಗೂ, ಸಮಾಜಕ್ಕೂ ಕೀರ್ತಿ ತಂದಿದ್ದಾರೆ. ಇವರ ಭವಿಷ್ಯ ಉಜ್ವಲವಾಗಲಿ ಎಂದು ಶ್ರೀಶಾರದಾ ಬಳಗವು ಹಾರೈಸುತ್ತದೆ.

ಇವರು ಪ್ರಸ್ತುತ ಹೈದರಾಬಾದಿನಲ್ಲಿ ವಾಸವಾಗಿರುವ ಸಾಂತೂರು ಭಾಗ್ಯಚಂದ್ರರಾವ್ (President, SMC, Manufacturing Sandvik Asia Limited) ಹಾಗೂ ಆಶಾರವರ ಪ್ರಥಮ ಪುತ್ರಿ.

## ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.12-05-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ

**ಮೇ ತಿಂಗಳಲ್ಲಿ**

**ತಾ.09-05-2009ರ ಶನಿವಾರ**

ಸಂಜೆ ಗಂಟೆ 5-00ರಿಂದ

## ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ''ಶ್ರೀಶಾರದಾ ಪತ್ರಿಕೆ ಸಂಚಿಕೆ-100''

## ಸಮಾಜಬಾಂಧವರಿಗೆ ಪ್ರೀತಿಯ ನೂರು ನಮಸ್ಕಾರ

ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸಿದ ಶ್ರೀನಿಧಿ ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಅಗ್ರಹಾರ ಆಫ್‌ಸೆಟ್ಸ್ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ ಅನಂತ ಕೃತಜ್ಞತೆಗಳು.



ಮತ್ತೆ ಯುಗಾದಿ ಮರಳಿ ಬಂದಿದೆ. ನಮ್ಮ ಎಲ್ಲಾ ಸಮಾಜಬಾಂಧವರಿಗೆ **''ಸೌರಮಾನ ಯುಗಾದಿ''** ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

-ಸಂಪಾದಕ ಮಂಡಳಿ

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ ಕೇಳಿದವರು : ಶ್ರೀ ಎ. ಆರ್. ರಾವ್** **ಉತ್ತರಿಸಿದವರು : ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ : ಜೀರ್ಣಾಂಗವ್ಯೂಹದ ಜಂತು, ಅಮೀಬ ಮತ್ತು ಬ್ಯಾಕ್ಟೀರಿಯ ಬಾಧೆಯನ್ನು ನಿವಾರಿಸಿಕೊಳ್ಳುವುದು ಹೇಗೆ?**

**ಉತ್ತರ :** ಅಮೀಬ ಹಾಗೂ ಬ್ಯಾಕ್ಟೀರಿಯಗಳು ಸೂಕ್ಷ್ಮದರ್ಶಕ ಯಂತ್ರದ ಮುಖಾಂತರವೇ ನಾವು ನೋಡಬೇಕಾದಷ್ಟು ಸಣ್ಣ ಶರೀರವನ್ನು ಹೊಂದಿರುವ ಪರಾವಲಂಬಿ ಪ್ರಾಣಿಗಳು. ಈ ಸೂಕ್ಷ್ಮ ಜೀವಾಣುಗಳು ನಮ್ಮ ದೇಹದ ಯಾವುದೇ ಅಂಗವನ್ನು ಸೇರಿಕೊಂಡರೆ ಅಲ್ಲಿ ಮನೆ ಮಾಡಿಕೊಂಡು ಆ ಅಂಗವನ್ನು ಕೊರೆದು, ಕೊಳೆಯಿಸಿ, ತಿಂದು ಹಾಳು ಮಾಡಿ ಬಿಡುವವು. ಆಗ ನಮಗೆ ಆ ಅಂಗಕ್ಕೆ ಸಂಬಂಧಿಸಿದ ಖಾಯಿಲೆ ಬರುವುದು. ಜಂತುಗಳು ಇದೇ ತರಹದ ಜೀವಿಗಳಾದರೂ ಬರಿಗಣ್ಣಿಗೆ ಕಾಣುವಷ್ಟು ದೊಡ್ಡದಾಗಿರುತ್ತವೆ. ಒಂದು ವೇಳೆ ಈ ಜೀವಿಗಳು, ಅವುಗಳ ಮರಿ ಇಲ್ಲವೇ ಮೊಟ್ಟೆಯ ರೂಪದಲ್ಲಿ, ತಿನ್ನುವ ಆಹಾರ ಅಥವಾ ನೀರಿನಲ್ಲಿ ಸೇರಿಕೊಂಡು ನಮ್ಮ ಜೀರ್ಣಾಂಗವ್ಯೂಹವನ್ನು ಪ್ರವೇಶಿಸಿದರೆ, ಕರುಳಿನಲ್ಲಿ ನೆಲೆ ನಿಂತು ಅಲ್ಲಿ ಸಂತಾನೋತ್ಪತ್ತಿ ನಡೆಸಿ ಮೊದಲು ತಮ್ಮ ಸಂಖ್ಯೆಯನ್ನು ಸಾಕಷ್ಟು ಹೆಚ್ಚಿಸಿಕೊಂಡ ಬಳಿಕ ತಮ್ಮ ಪ್ರತಾಪವನ್ನು ತೋರಿಸಲು ಆರಂಭಿಸುವವು. ಈ ಖಾಯಿಲೆಯನ್ನು ಕರುಳಿನ ಉರಿಯೂತವೆಂದು ಕರೆಯಬಹುದು. ಇಂತಹ ಕರುಳನ್ನು ವೀಕ್ಷಿಸಿದಾಗ ಆ ಕರುಳು ಕೆಂಪಗಾಗಿರುವುದೂ, ಕೆಲವೆಡೆ ಗಾಯಗಳಾಗಿರುವುದೂ, ಕೆಲವೊಮ್ಮೆ ಕೀವಾಗಿರುವುದೂ ಕಂಡು ಬರುತ್ತದೆ. ಈ ಖಾಯಿಲೆಯಿಂದ ಬಳಲುವ ರೋಗಿಗೆ ಹೊಟ್ಟೆನೋವು, ಹೊಟ್ಟೆ ಉಬ್ಬರಿಸುವುದು, ಭೇದಿ, ಜ್ವರ ಇತ್ಯಾದಿ ಚಿಹ್ನೆಗಳು ಖಾಯಿಲೆಯ ತೀವ್ರತೆಯ ಮೇಲೆ ಇರಬಹುದು. ಈ ರೋಗಿಯು ವಿಸರ್ಜಿಸುವ ಮಲದಲ್ಲಿ ಈ ಸೂಕ್ಷ್ಮ ಜೀವಿಗಳ ಮರಿಗಳೂ, ಮೊಟ್ಟೆಗಳೂ ಇದ್ದು, ಅವು ಬೇರೆ ಬೇರೆ ವಿಧದಲ್ಲಿ ನಮ್ಮ ಆಹಾರ ಮತ್ತು ಕುಡಿಯುವ ನೀರನ್ನು ಸೇರಿಕೊಂಡರೆ, ಅಂಥಹ ಕಲುಷಿತ ಆಹಾರ ಅಥವಾ ನೀರನ್ನು ಸೇವಿಸಿದವನ ಕರುಳಿನಲ್ಲಿ ಈ ಸೂಕ್ಷ್ಮ ಜೀವಿಗಳು ಬೆಳೆದು ಅವನಿಗೂ ಈ ಖಾಯಿಲೆ ತರುವವು. ನೆನಪಿನಲ್ಲಿಡಿ, ಮಣ್ಣಿಗೆ ಸೇರಿಕೊಂಡ ಈ ಜೀವಿಗಳ ಮೊಟ್ಟೆ ವರುಷಗಟ್ಟಲೆ ಜೀವಂತವಿರುವುದು.

**ಚಿಕಿತ್ಸೆ :** ಈ ಜೀವಿಗಳನ್ನು ನಾಶ ಮಾಡಬಲ್ಲಂತಹ ಪರಿಣಾಮಕಾರಿ ಔಷಧಗಳು ಎಲ್ಲಾ ಕಡೆಗಳಲ್ಲೂ ಲಭ್ಯವಿದೆ. ತಜ್ಞವೈದ್ಯರ ಸಲಹೆಯ ಮೇರೆಗೆ ಸೇವಿಸಿದಲ್ಲಿ ನೂರು ಪ್ರತಿಶತ ಗುಣವಾಗುವುದು. ಆದರೆ ಈ ಕ್ರಿಮಿಬಾಧೆ ಪುನಃ ಪುನಃ ಕಾಡಬಾರದಾದರೆ ಈ ಕ್ರಿಮಿಗಳನ್ನು ನಮ್ಮ ದೇಹವನ್ನು ಪ್ರವೇಶಿಸಿದಂತೆ ತಡೆಗಟ್ಟಬೇಕಲ್ಲದೆ, ಅದು ಔಷಧಿಗಳಿಂದಾಗುವ ಕೆಲಸವಲ್ಲ. ಹಾಗಾದರೆ ಈ ಸೂಕ್ಷ್ಮ ಜೀವಿಗಳು ನಮ್ಮ ಜೀರ್ಣಾಂಗವ್ಯೂಹವನ್ನು ಪ್ರವೇಶಿಸದಂತೆ ತಡೆಯುವುದು ಹೇಗೆ?

1) ಕಲುಷಿತ ನೀರು ಹಾಗೂ ಆಹಾರವನ್ನು ಸೇವಿಸದಿರುವುದು (ಸ್ವಂತ ನೆಲೆಯಲ್ಲಿ)

2) ನೀರು ಹಾಗೂ ಆಹಾರ ಕಲುಷಿತವಾಗದಂತೆ ಮಾಡುವುದು (ಎಲ್ಲರೂ ಕೂಡಿ ಸಾಮಾಜಿಕ ಪ್ರಜ್ಞೆಯಿಂದ ಮಾಡಬೇಕಾದ ಕೆಲಸ)

3) ಕ್ರಿಮಿವಾಹಕಗಳ ನಾಶ : ಉದಾ- ವಿಸರ್ಜಿಸಿದ ಮಲದ ಮೇಲೆ ಕುಳಿತ ನೊಣ ಹಾರಿ ಆಹಾರದ ಮೇಲೆ ಕುಳಿತಾಗ ಅದರ ಕಾಲುಗಳ ಮುಖಾಂತರ ಮಲದಲ್ಲಿದ್ದ ಕ್ರಿಮಿಯನ್ನು ತಿನ್ನುವ ಆಹಾರಕ್ಕೆ ಸಾಗಿಸುವುದು. ಅದೇ ರೀತಿ ಮಲಮೂತ್ರ ವಿಸರ್ಜಿಸಿ ಕೈ ತೊಳೆಯದೇ ಅಡುಗೆ ಮಾಡುವ ಅಡಿಗೆಯವನೂ ಕ್ರಿಮಿವಾಹಕನಾಗಬಲ್ಲನು. ನೆನಪಿನಲ್ಲಿಡಿ, ಸೂಜಿಯ ಮೊನೆಯಷ್ಟು ಜಾಗದಲ್ಲಿ ಮಿಲಿಯಗಟ್ಟಲೆ ಇಂತಹ ಸೂಕ್ಷ್ಮಾಣುಗಳಿರುತ್ತವೆ.

4) ಸ್ವಂತ ನೆಲೆಯಲ್ಲಿ ಆದರೆ ಎಲ್ಲರೂ ಆಚರಿಸಬೇಕಾದ ಕ್ರಮಗಳು : ಉದಾ-ಊಟದ ಮೊದಲು ಮತ್ತು ಮಲಮೂತ್ರ ವಿಸರ್ಜನೆಯ ನಂತರ ಸಾಬೂನು ಬಳಸಿ ಕೈ ತೊಳೆಯುವುದು, ಮಲಮೂತ್ರ ವಿಸರ್ಜನೆಗೆ ಶೌಚಾಲಯವನ್ನೇ ಬಳಸುವುದು, ಉಗುರುಗಳನ್ನು ಸಣ್ಣದಾಗಿ ಕತ್ತರಿಸಿಕೊಳ್ಳುವುದು (ಉಗುರಿನ ಎಡೆಯು ಕ್ರಿಮಿಯ ಮರಿ ಹಾಗೂ ಮೊಟ್ಟೆಗಳು ಅಡಗಿಕೊಳ್ಳಲು ಪ್ರಶಸ್ತವಾದ ಸ್ಥಳ), ತರಕಾರಿಯನ್ನು ಬಳಸುವ ಮೊದಲು ಚೆನ್ನಾಗಿ ತೊಳೆಯುವುದು, ಎಲ್ಲಿಯೂ ನೀರಿನ ಪಾತ್ರೆಗೆ ನೇರವಾಗಿ ಕೈ ಮುಳುಗಿಸದಿರುವುದು, ಆಹಾರವನ್ನು ಚಮಚೆ ಅಥವಾ ಸೌಟಿನಿಂದಲೇ ಕಲಸುವುದು ಹಾಗೂ ಬಡಿಸುವುದು, ಆಹಾರ ಪದಾರ್ಥಗಳ ಮೇಲೆ ನೊಣ ಕುಳಿತುಕೊಳ್ಳದಂತೆ ಮುಚ್ಚಿಡುವುದು ಹಾಗೂ ಶುದೀಕರಿಸಿದ ನೀರನ್ನೇ ಉಪಯೋಗಿಸುವುದು.

ಇಂತಹ ಎಲ್ಲ ಕ್ರಮಗಳನ್ನು ಸ್ವಯಂ ಸ್ಫೂರ್ತಿಯಿಂದ ಎಲ್ಲರೂ ಪಾಲಿಸಿದರೆ ಕರುಳಿನ ಉರಿಯೂತ ಮಾತ್ರವಲ್ಲದೇ ನೀರು ಮತ್ತು ಆಹಾರದ ಮೂಲಕ ಹರಡುವ ರೋಗಗಳನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 98451 36322**

## ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ-2.**
**ದೂರವಾಣಿ : 0820-2520754**

## ಶ್ರೀಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಪಡುಬಿದ್ರಿಯಲ್ಲಿ ಬಸ್ಸು ನಿಲ್ದಾಣದಿಂದ ಪೂರ್ವಕ್ಕೆ ಸುಮಾರು 150 ವರ್ಷಗಳಷ್ಟು ಪುರಾತನವಾದ ಕಳೆದ ವರ್ಷ ಜೀರ್ಣೋದ್ಧಾರ ಹಾಗೂ ಪುನರ್‌ಪ್ರತಿಷ್ಠೆಗೊಂಡ **ಶ್ರೀಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ ಹಾಗೂ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ದಿನಾಂಕ 17-04-2009ರಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ**

### ದೃಢಕಲಶೋತ್ಸವ ಮತ್ತು ವರ್ಷಾವಧಿ ಉತ್ಸವ

ಮತ್ತು ಮಧ್ಯಾಹ್ನ ಮಹಾಅನ್ನಸಂತರ್ಪಣೆಯು ನೆರವೇರಲಿದೆ. ಈ ಕಾರ್ಯಕ್ರಮದಲ್ಲಿ ಭಕ್ತಬಾಂಧವರು ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆಯು ತಿಳಿಸಿದೆ.

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ

**ಅಂಚೆ ಹಳೆಯಂಗಡಿ - 574 146.**

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ

### ವರ್ಷಾವಧಿ ಉತ್ಸವ ಕಾರ್ಯಕ್ರಮವು

ನೆರವೇರಲಿದ್ದು ತಾ.17-04-2009ರಂದು **ಮಹಾರಥೋತ್ಸವ**ವು ನಡೆಯಲಿದೆ.

ಬೆಳಿಗ್ಗೆ 10-30ಕ್ಕೆ ರಥಾರೋಹಣವಾಗಿ **ಮಹಾಅನ್ನಸಂತರ್ಪಣೆ** ಹಾಗೂ ಸಂಜೆ ರಥೋತ್ಸವ, ರಂಗಪೂಜೆ, ಬಲಿ, ಶಯನೋತ್ಸವ ಕಾರ್ಯಕ್ರಮಗಳು ನೆರವೇರಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತ ಬಾಂಧವರು ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆಯು ತಿಳಿಸಿದೆ.

### ಸಾಮೂಹಿಕ ಉಪನಯನ

ತಾ.27-04-2009ರಂದು ಅಕ್ಷಯ ತದಿಗೆ ದಿನ ಸಾಮೂಹಿಕ ಉಪನಯನ ಜರಗಲಿದ್ದು, ಸಮಾಜ ಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮಂಡಳಿಯು ತಿಳಿಸಿದೆ.

### ಶ್ರೀ ಶಂಕರ ಜಯಂತಿ

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾ.29-04-2009ರಂದು ಶ್ರೀ ಶಂಕರ ಜಯಂತಿ ಕಾರ್ಯಕ್ರಮವನ್ನು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶ್ರೀ ದೇವಸ್ಥಾನದ ಆಡಳಿತ ಮಂಡಳಿಯ ಅಪೇಕ್ಷೆ.

### ಪ್ರತಿಷ್ಠಾ ವರ್ಧಂತಿ


ತಾ.27-05-2009ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾ ವರ್ಧಂತಿಯಂದು ಸಾಮೂಹಿಕ ಉಪನಯನ ಕಾರ್ಯಕ್ರಮವು ನೆರವೇರಲಿದೆ. ಸಮಾಜಬಾಂಧವರು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಶ್ರೀ ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆ ತಿಳಿಸಿದೆ.

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ.)

**ಜ್ಞಾನಶಕ್ತಿ ಮಂಟಪ, ಜ್ಞಾನಶಕ್ತಿನಗರ, ಕೋಡಿಗೆಹಳ್ಳಿ ಪೋಸ್ಟ್, ವಿಶ್ವನೀಡಂ, ಬೆಂಗಳೂರು - 560 091. ಫೋನ್ : 25535351**



### ಜ್ಞಾನಶಕ್ತಿ ಕ್ರಿಕೆಟ್ ಪಂದ್ಯಾಟ



ದಿನಾಂಕ 10-05-2009ರ ಭಾನುವಾರ ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಆಶ್ರಯದಲ್ಲಿ ಜ್ಞಾನಶಕ್ತಿ ಕ್ರಿಕೆಟ್ ಪಂದ್ಯಾಟವನ್ನು ಜಾಲಹಳ್ಳಿಯಲ್ಲಿರುವ ಬಿ.ಇ.ಎಲ್. ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ತಮ್ಮ ಯುವ ಆಟಗಾರರ ತಂಡವು ಪಂದ್ಯವನ್ನು ವೀಕ್ಷಿಸುವ ಉತ್ಸುಕರೊಂದಿಗೆ ಈ ಪಂದ್ಯಾಟದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತೇವೆ.

ನಿಮ್ಮೆಲ್ಲರ ಪ್ರೋತ್ಸಾಹ ಮತ್ತು ಸಹಾಯದಿಂದ ಮಾತ್ರ ನಮ್ಮ ಗುರಿಸಾಧನೆ ಈಡೇರಲಿದೆ. **ಪರವೂರಿನಿಂದ ಬರುವ ತಂಡಗಳಿಗೆ ಬೆಂಗಳೂರಿನಲ್ಲಿ ಹಿಂದಿನ ದಿವಸದ ತಂಗುವ ವ್ಯವಸ್ಥೆ, ಊಟ ತಿಂಡಿಗಳ ವ್ಯವಸ್ಥೆಯನ್ನು ಕೂಡಾ ಮಾಡಲಾಗುವುದು. ಇದಕ್ಕಾಗಿ ನಮ್ಮನ್ನು ಮುಂಚಿತವಾಗಿ ಸಂಪರ್ಕಿಸಬೇಕಾಗಿ ವಿನಂತಿ. ತಂಡಗಳು ತಮ್ಮನ್ನು ನೊಂದಾಯಿಸಲು ಈ ಕೆಳಗಿನ ಕಾರ್ಯಕರ್ತರನ್ನು ಸಂಪರ್ಕಿಸಿ.**

**ರಾಜೇಶ್ ಕುಡುಪು (98864 81193), ಮಂಜುನಾಥ್ ಪರೀಕ (99002 04499). ಮಹೇಶ್ ಕುಮಾರ್ (99865 04454), ಸಿ. ಆರ್. ಸುಬ್ರಹ್ಮಣ್ಯ (97400 22733), ಐ.ಕೆ. ರಾಜೇಂದ್ರ (98867 01025)**

## ವಧು-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**

## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತೀ ಬುಧವಾರ ಸೌಂದರ್ಯಲಹರೀ ಪಾರಾಯಣ



ಆಚಾರ್ಯ ಶಂಕರಭಗವತ್ಪಾದರಿಂದ ರಚಿತವಾದ ಸೌಂದರ್ಯಲಹರೀ ಸ್ತೋತ್ರವು ಸ್ತೋತ್ರಗಳಲ್ಲಿಯೇ ವಿಶಿಷ್ಟವಾದದ್ದು. ಇದು ಶಕ್ತಿ, ವಿದ್ಯೆ ಹಾಗೂ ಲಕ್ಷ್ಮೀಸ್ವರೂಪಿಣಿಯಾದ ವಿಶ್ವಮಾತೆಯನ್ನು ಕುರಿತಾದ ಸ್ತೋತ್ರ. ಇದರ ಒಂದು ಪದ್ಯದಲ್ಲಿ ಆಚಾರ್ಯರು-''ತಾಯೀ! ನೀನು ಸರಸ್ವತೀ, ಲಕ್ಷ್ಮೀ, ಪಾರ್ವತೀ ಮಾತ್ರವಾಗಿರದೆ ಇವೆಲ್ಲವನ್ನು ಮೀರಿದ ತುರೀಯಳೂ ಪರಮಾನಂದಸ್ವರೂಪಳೂ, ಪರಬ್ರಹ್ಮನ ಶಕ್ತಿಯೂ ಆಗಿದ್ದೀಯೆ''-ಎಂದು ವರ್ಣಿಸುತ್ತಾರೆ. ಸಾಕಾರವಾಗಿ ಪೂಜೆಗೊಳ್ಳುವ ಅನೇಕ ದೇವಾನುದೇವತೆಗಳ ನಿರಾಕಾರ ಮೂಲಸ್ತೋತ್ರಅವಳು. ಆದ್ದರಿಂದ ಜಗನ್ಮಾತೆಯ ಅರ್ಚನೆ ಸಕಲದೇವತೆಗಳ ಅರ್ಚನೆ. ನಾನಾ ದೇವತೆಗಳ ಆಕಾರವನ್ನೇ ನೆಚ್ಚಿಕೊಂಡು ಆ ಮೂಲಕ ವಿಚ್ಛಿದ್ರತೆಯತ್ತ ಸಾಗುತ್ತಿರುವ ಸಮಾಜದಲ್ಲಿ ದೇವಿಯ ಆರಾಧನೆ ಭಾವೈಕ್ಯವನ್ನು ಭದ್ರಗೊಳಿಸುವ ದಿವ್ಯೌಷಧವಾಗಬಲ್ಲದು. ಅದೂ ಅಲ್ಲದೆ, ಇದು ಕೇವಲ ಸ್ತೋತ್ರಮಾತ್ರವಾಗಿರದೆ ಇದರಲ್ಲಿಯ ಒಂದೊಂದು ಪದ್ಯವೂ ಒಂದೊಂದು ಮಂತ್ರವಾಗಿದೆ. ಬಲ, ವಿದ್ಯೆ, ಸಂಪತ್ತು, ಸಂಗೀತ ನೈಪುಣ್ಯ, ಪುತ್ರಪ್ರಾಪ್ತಿ, ಆರೋಗ್ಯಭಾಗ್ಯ, ಜ್ವರ ಮತ್ತು ಗ್ರಹದೋಷಗಳ ನಿವಾರಣೆ ಇವುಗಳಿಗೆ ಸಾಧಕರು ಈ ಸ್ತೋತ್ರಗಳನ್ನು ಪಠಿಸಿ ಫಲವನ್ನು ಪಡೆದಿದ್ದಾರೆ. ತಮ್ಮ ಅನುಭವವನ್ನು ಇತರರೊಡನೆ ಹಂಚಿಕೊಂಡಿದ್ದಾರೆ. ಸೌಂದರ್ಯಲಹರಿಯ ಪಾರಾಯಣಕ್ಕೆ ಜಾತಿ-ಮತ-ವಯಸ್ಸು-ಲಿಂಗಗಳ ನಿಯಮವಿಲ್ಲ. ಯಾರಾದರೂ ಸರಿಯೆ ನಿಶ್ಚಲಭಕ್ತಿಯಿಂದ ಇದನ್ನು ಪಠಿಸಿ ಮನಃಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ವೇದಾಂತಭಾರತೀ ಮೈಸೂರು ಇವರಿಂದ ಪ್ರಕಟಿತ ''ಸೌಂದರ್ಯಲಹರೀ'' ಎಂಬ ಪುಸ್ತಕದಲ್ಲಿ ತಿಳಿಸಲಾಗಿದೆ.

**ಪ್ರತಿ ಬುಧವಾರ ಸಂಜೆ ಗಂಟೆ 5-00ರಿಂದ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಪುಣ್ಯ ಕೃತಿ ಶ್ರೀ ದೇವಿ ಸ್ತೋತ್ರ "ಸೌಂದರ್ಯಲಹರೀ" ಪಾರಾಯಣ ನಡೆಯುತ್ತಿದೆ. ನಮ್ಮ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.**

**- ಮಹಿಳಾ ವೇದಿಕೆ**


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ : 2556536 (R), 2555466 (O)**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ.। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಎಲ್ಲಾ ತರಹದ ಸುಖಕರ ಪ್ರವಾಸ-ಪ್ರಯಾಣಕ್ಕಾಗಿ ವಿಚಾರಿಸಿರಿ


### ಸಮಾಜ ಬಾಂಧವರಿಗೆ ವಿಶೇಷ ರಿಯಾಯಿತಿ ಸೌಲಭ್ಯ

# ಶ್ರೀ ''ಕುಂಕುಂ'' ಟೂರ್ಸ್

**ಐಡಿಯಲ್ ಕಾಂಪ್ಲೆಕ್ಸ್, ಅಲೆವೂರು ರೋಡ್, ಶಾಂತಿನಗರ, ಮಣಿಪಾಲ್ - 576 104.**



**ಫೋನ್ : 99454 14338**




Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754